ಶ್ರೀ ಡಿ. ಬಿ. ಚಂದ್ರೇಗೌಡ : ನಾವು ಎಲ್ಲಾ ಕನ್ನಡವನ್ನು ಕಲಿತುಕೊಂಡು ಬಂದಿರುವವರೆ, ಎಲ್ಲದಕ್ಕೂ ಒಂದು ಇತಿಮಿತಿ ಇರಬೇಕು. ನಾನು ಈಗಾಗಲೇ ತಪ್ಪಾಗಿದೆ ಅದನ್ನು ಸರಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದೇನೆ. ಪದೇ ಪದೇ ಈ ರೀತಿ ಹೇಳಿದರೆ ಹೇಗೆ? ಅವರು ಕೂಡ ಮಂತ್ರಿಯಾಗಿದ್ದವರು, ಎಲ್ಲವನ್ನೂ ಕನ್ನಡದಲ್ಲಿ ಮಾಡಿದ್ದಾರೆಯೇ? ಎಲ್ಲೋ ಒಂದು ಕಡೆ ತಪ್ಪಾಗುತ್ತದೆ ಅದನ್ನು ನಾವು ಸರಿಪಡಿಸಿಕೊಳ್ಳುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಹೀಗಾಗಿ ಇದನ್ನೇ ಪದೇ ಪದೇ ಒತ್ತಿ ಹೇಳುವುದರಲ್ಲಿ ಅರ್ಥವಿಲ್ಲ.

ರಾಜ್ಯದಲ್ಲಿ ಆಹಾರ ಪಡಿತರ ಮತ್ತು ದಿನಬಳಕೆಯ ವಸ್ತುಗಳ ಬೆಲೆಯನ್ನು ಜಾಸ್ತಿ ಮಾಡಿರುವ ಕುರಿತು.

ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಸುಮಾರು ಎರಡೂವರೆ ಕೋಟಿ ಜನಸಂಖ್ಯೆ ಉಪಯೋಗಿಸತಕ್ಕಂಥ ಆಹಾರಪಡಿತರ ವ್ಯವಸ್ಥೆಯಂಥ ಗಂಭೀರವಾದ ವಿಚಾರದ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ನಾನು ಬಯಸುತ್ತೇನೆ. ಇದೇ ವಿಚಾರಕ್ಕಾಗಿ ಹೆಚ್ಚಿನ ಸಮಯ ಕೊಟ್ಟು ಇದನ್ನು ನಿಲುವಳಿ ಸೂಚನೆಯ ಮೇರೆಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ಮನವಿ ಮಾಡಿದ್ದೇನೆ. ಈ ಚರ್ಚೆಯಲ್ಲಿ ಆ ಭಾಗದ ಸದಸ್ಯರು ಮತ್ತು ನಮ್ಮ ವಿರೋಧ ಪಕ್ಷದ ಸದಸ್ಯರು ಭಾಗವಹಿಸುವ ಅವಶ್ಯಕತೆ ಇದೆ. ಆದ್ದರಿಂದ, ನಿಮ್ಮ ಮನಸ್ಸನ್ನು ಒಲಿಸಿಕೊಳ್ಳಲಿಕೆ ನಾವು ಪ್ರಯತ್ನಿಸಿ ನಿಲುವಳಿ- ಸೂಚನೆಯ ಮೇರೆಗೆ ಚರ್ಚೆ ಪ್ರಾರಂಭಿಸುವುದಕ್ಕೆ ಅನುಮತಿ ಕೊಡಬೇಕೆಂದು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಆರ್ಥಿಕ ಇಲಾಖೆ, ವಿದ್ಯುತ್ ಇಲಾಖೆ, ಇವೆ. ಇಲ್ಲಿ ನಮಗೆ ಬಂದಿರುವ ತೊಂದರೆ ಏನೆಂದರೆ, ಅವರಿಗೆ ಸಂಬಂಧಪಟ್ಟಿರುವ ಇಲಾಖೆಗಳ ಬಗ್ಗೆ ಅವರು ಉತ್ತರ ಕೊಡುವುದಿಲ್ಲ. ನಿನ್ನೆ ಅವರಿಂದ ಏನಾದರೂ ಒಂದು ಮಾತಿನ ಮುತ್ತು ಉದುರುತ್ತದೆ ಎಂದು ನಾವು ಬಹಳ ಕಷ್ಟಪಟ್ಟೆವು ಆದರೆ ಅವರಿಂದ ಯಾವ ಮುತ್ತು ಉದುರಲಿಲ್ಲ. ನಾನು ಏಕೆ ಈ ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು ಎಂದು ಹೇಳುತ್ತೇನೆಂದರೆ, ಕೇಂದ್ರ ಸರ್ಕಾರ ಮಾಡಿರುವುದನ್ನು ನಾನು ಡಿಫೆಂಡ್ ಮಾಡುವುದಕ್ಕೆ ಹೋಗುವುದಿಲ್ಲ: ನಾವು ಜನತಾ ದಳ (ಸಂಯುಕ್ತ) ಎನ್. ಡಿ. ಎ. ದ ಒಂದು ಅಂಗವಾಗಿದ್ದೇವೆ. ನಾವು ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರಕ್ಕೂ ಕೂಡ ಒತ್ತಾಯ ಮಾಡಿ ಹೇಳಿದ್ದೇವೆ. ನಮ್ಮ ಪಕ್ಷದ ಅಧ್ಯಕ್ಷರು ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿಯಾಗಿ ಪಡಿತರ ಬೆಲೆಯನ್ನು ಇಳಿಸಬೇಕು, ಗೊಬ್ಬರದ ಮೇಲೆ ವಾಪಸ್ ತೆಗೆದುಕೊಂಡಿರುವ ಸಬ್ಸಿಡಿಯನ್ನು ಪುನಃ ಕೊಡಬೇಕು, ಬಡವರು ಉಪಯೋಗಿಸುವ ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆ, ಇದರ ಮೇಲೆ ಕೊಡುವ ಸಬ್ಸಿಡಿಯನ್ನು ಪುನಃ ಕೊಡಬೇಕೆಂದು ಈಗಾಗಲೇ ಪ್ರಸ್ತಾಪಿಸಿದ್ದೇವೆ. ಮಾನ್ಯ ಚಂದ್ರೇಗೌಡರವರಿಗೆ ಗೊತ್ತಿರುವ ಹಾಗೆ 1983-84 ರಲ್ಲಿ ಈ ಸಭೆಯ ಅಧ್ಯಕ್ಷರಾಗಿ ಮಾನ್ಯ ಚಂದ್ರೇಗೌಡರವರು ಕಾರ್ಯನಿರ್ವಹಿಸಿದ್ದರು. ಆಂಧ್ರ ಪ್ರದೇಶದಲ್ಲಿ ಮಾನ್ಯ ಎನ್. ಟಿ. ರಾಮ್‌ರಾವ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, ಇಡೀ ದೇಶದಲ್ಲೇ ಮೊಟ್ಟಮೊದಲನೆಯದಾಗಿ ಬಡತನ ರೇಖೆಗಿಂತ ಕೆಳಗಿರುವ ಬಡವರಿಗೆ ಸಹಕಾರ ಮಾಡಬೇಕು ಎನ್ನುವ ಉದ್ದೇಶದಿಂದ ಎರಡು ರೂಪಾಯಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡುವ ಕಾರ್ಯಕ್ರಮವನ್ನು ಹಾಕಿದರು. ಆಗಲೂ ಕೂಡ ರಾಜ್ಯದ ಹಣಕಾಸಿನ ಪರಿಸ್ಥಿತಿ

ಬಹಳ ಚೆನ್ನಾಗಿತ್ತೆಂದು ನಾವು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ಬಹುಶಃ ತಮಗೆ ಗೊತ್ತಿರಬಹುದು, ಏಕೆಂದರೆ ನೀವು ತೀರಾ ಬಡತನದ ಜಿಲ್ಲೆಯಿಂದ ಬಂದಿರತಕ್ಕಂಥವರು. ಒಂದು ಗ್ರಾಮದಲ್ಲಿ 100 ಜನ ಇದ್ದಾರೆಂದರೆ ಅದರಲ್ಲಿ 70 ಜನಗಳಿಗೆ ಭೂಮಿ ಇರುವುದಿಲ್ಲ, ಉಳಿದ 30 ಜನಗಳಿಗೆ ಮಾತ್ರ ಭೂಮಿ ಇರುತ್ತದೆ. ಈ ಮೂವತ್ತು ಜನಗಳ ಭೂಮಿಯಲ್ಲಿ 70 ಜನ ಭೂಮಿ ಇಲ್ಲದೇ ಇರತಕ್ಕಂಥವರು ಒಂದು ಹೊತ್ತಿನ ಊಟಕ್ಕಾಗಿ ಕೂಲಿ ಕೆಲಸ ಮಾಡುತ್ತಿದ್ದಾರೆ. ಇಂಥ ವರ್ಗದ ಜನಗಳಿಗೆ ನಾವು ಬೇರೆ ಯಾವುದೇ ರೀತಿಯಿಂದಲೂ ಸಹಾಯ ಮಾಡುವುದಕ್ಕೆ ಆಗಿಲ್ಲವೆಂಬುದು ನಮಗೂ ಗೊತ್ತಿದೆ. ಅದರಿಂದಾಗಿ ಬಡವರಿಗೆ ಎರಡು ರೂಪಾಯಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡುವ ಕಾರ್ಯಕ್ರಮವನ್ನು ಮೊಟ್ಟಮೊದಲಿಗೆ ಕರ್ನಾಟಕದಲ್ಲಿ ನಾವು ತೆಗೆದುಕೊಂಡು ಬಂದೆವು. ಆಗಿನ ಕಾಲದಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಸುಮಾರು 120 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತಿದ್ದೆವು. ಏಕೆಂದರೆ, ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಈ ಆಹಾರವನ್ನೆಲ್ಲಾ ಪ್ರೊಕ್ಯೂರ್ ಮಾಡತಕ್ಕಂಥವರು ಹಾಗೂ ವಿವಿಧ ರಾಜ್ಯಗಳಿಗೆ ಅಲಾಟ್ ಮಾಡತಕ್ಕಂಥವರು.

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಅವರಿಗೆ ನೀವು ಚರ್ಚೆ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದೀರಾ?

ಅಧ್ಯಕ್ಷರು : ನನ್ನ ಮನ ಒಲಿಸಿಕೊಳ್ಳುವುದಕ್ಕಾಗಿ ಅವರು ಈಗ ಮಾತನಾಡುತ್ತಾರೆ, ನಂತರ ನಾನು ಅವರಿಗೆ ಅವಕಾಶ ಕೊಡುತ್ತೇನೆ. ಅವರಿಗಿನ್ನೂ ಅವಕಾಶ ಕೊಟ್ಟಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ : ನಾನು ಈಗಾಗಲೇ ತಮಗೆ ಒಂದು ಗಂಟೆಯ ಅವಧಿಗಿಂತ ಮುಂಚಿತವಾಗಿ ನೋಟೀಸ್ ಕೊಟ್ಟಿದ್ದೇನೆ. ಮಾನ್ಯ ಚಂದ್ರೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದಾಗ ಫ್ರಿಲಿಮಿನರಿ ಸಬ್-ಮಿಷನ್‌ಗೆ ಸುಮಾರು ಎರಡೂವರೆ ಗಂಟೆ ಸಮಯ ತೆಗೆದುಕೊಂಡಿರತಕ್ಕಂಥ ಉದಾಹರಣೆ ಇದೆ. ಇವತ್ತು ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಇವರ ಪಾರ್ಟಿಯವರು ಹೊರಗಡೆ ಧರಣಿ ಮಾಡುತ್ತಿದ್ದಾರೆ, ಇದಕ್ಕೆ ಮಂತ್ರಿಗಳು ಯಾರು ಹೋಗಬಾರದೆನ್ನುವ ಸೆನ್ಸಿಬಲ್ ಡಿಸಿಷನ್ ತೆಗೆದುಕೊಂಡಿದ್ದಾರೆ. ಅಂಥ ಗಂಭೀರವಾದ ವಿಚಾರದ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋದರೆ, ಇವರು ಪ್ರಸ್ತಾಪ ಮಾಡುವುದು ಬೇಡ ಎಂದು ಹೇಳುವುದಾದರೆ ಈ ಸದನ ಬಡವರ ಪರ ಇರದೇ ಇನ್ಯಾರ ಪರ ಇದೆ?

ಅಧ್ಯಕ್ಷರು : ಅವರು ಪ್ರಸ್ತಾಪ ಮಾಡಬೇಡಿ ಎಂದು ಹೇಳಲಿಲ್ಲ; ಚರ್ಚೆಗೆ ಅವಕಾಶ ಮಾಡಿದ್ದೀರಾ ಎಂದು ಕೇಳಿದರು. ಚರ್ಚೆಗೆ ಅನುಮತಿಸುತ್ತೀರಾ ಎಂದು ಕೇಳಿದರು.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಏನು ಹೇಳಿದೆ ಎಂದರೆ, ಬಡವರ ಪರ, ಕನ್ನಡದ ಪರ ಎಂದು ಈ ಮಾತುಗಳನ್ನು ಆಡುವುದರ ಬದಲು ಆಡ್ಮಿಸಿಬಿಲಿಟಿಯಾಗಿ ಮಾತನಾಡುತ್ತಿದ್ದಾರೋ ಚರ್ಚೆಯನ್ನು ಆರಂಭ ಮಾಡುತ್ತಿದ್ದಾರೋ ಎಂದು.

ಶ್ರೀ ಪಿ. ಜಿ. ಆರ್. ಸಿಂಧ್ಯ : ನೋಡಿ, ಅವರಿಗೆ ಇರಿಟೇಟ್ ಆಗುತ್ತಿದ್ದರೆ, ಬಹುಶಃ ಅವರಿಗೆ ರಕ್ತದ ಒತ್ತಡ ಇರಬೇಕು ಎಂದು ನನಗನಿಸುತ್ತದೆ. ಕನ್ನಡದ ಬಗ್ಗೆ ಮಾನ್ಯ ಸದಸ್ಯರು

ಏನು ಹೇಳಿದರು ಎಂದರೆ, ಸುತ್ತೋಲೆಗಳನ್ನು ಕನ್ನಡದಲ್ಲಿಯೇ ಕಳುಹಿಸಬೇಕು ಎಂದು ಹೇಳಿದರು, ನಾನು ಅದನ್ನೇನಾದರೂ ಪ್ರಸ್ತಾಪಿಸಿದೆನೆ? ನಾನು ಹೇಳತಕ್ಕಂಥ ವಿಷಯವನ್ನು ತಪ್ಪಿಸಲಿಕ್ಕೆ ಸರ್ಕಾರ ಮಾಡತಕ್ಕಂಥ ಪ್ರಯತ್ನ ಇದು.

ಅಧ್ಯಕ್ಷರು : ಈ ಬಗ್ಗೆ ಚರ್ಚೆ ಆರಂಭವಾಗಿದೆಯೇ ಎಂದು ಕೇಳಿದರೆ ಹೊರತು, ಚರ್ಚೆಗೆ ಅವಕಾಶ ಕೊಡಬೇಡಿ ಎಂದು ಅವರು ಹೇಳಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಸಿಂಧ್ಯರವರೇ, ತಾವೇ ಕೊಟ್ಟಿರುವ ಬಳುವಳಿ ಇದು.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ತಮಗೆ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿರುತ್ತೇನೆ, ಇದಕ್ಕೆ ಅವಕಾಶ ಮಾಡಿಕೊಡುವುದು, ಬಿಡುವುದು, ತಮಗೆ ಬಿಟ್ಟ ವಿಚಾರ. ದಯಮಾಡಿ ನನಗೆ ಈ ವಿಚಾರದ ಬಗ್ಗೆ ಪ್ರಸ್ತಾಪಿಸುವುದಕ್ಕೆ ಸಮಯಾವಕಾಶ ಕೊಡಬೇಕು ಎಂದು ತಮ್ಮಲ್ಲಿ ನಾನು ಮತ್ತೊಮ್ಮೆ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು : ಈ ವಿಚಾರದ ಬಗ್ಗೆ ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ : ತಮಗೆ ಗೊತ್ತಿರುವ ಹಾಗೆ ಅನಾವಶ್ಯಕ ವಿಷಯಗಳ ಬಗ್ಗೆ ನಾನು ಪ್ರಸ್ತಾವಿಸುವುದಕ್ಕೆ ಬಯಸುವುದಿಲ್ಲ. ಕರ್ನಾಟಕದಲ್ಲಿ ಬಡ ಕುಟುಂಬಗಳ ಸಂಖ್ಯೆ 67 ಲಕ್ಷ ಇದೆ. ಕೇಂದ್ರ ಸರ್ಕಾರದವರು ಅವರ ಯಾರ್ಡ್‌ಸ್ಟಿಕ್ ಪ್ರಕಾರ ಕರ್ನಾಟಕದಲ್ಲಿ ಬಡ ಕುಟುಂಬಗಳ ಸಂಖ್ಯೆ :27 ಲಕ್ಷ ಎಂದು ಗುರುತಿಸಿದ್ದಾರೆ. 67 ಲಕ್ಷ ಬಡ ಕುಟುಂಬಗಳು ಎಂದರೆ ಒಂದು ಕುಟುಂಬದಲ್ಲಿ ನಾಲ್ಕು ಜನ ಎಂದರೆ ಒಟ್ಟಾರೆ ಎರಡು ಕೋಟಿ ನಲವತ್ತು ಲಕ್ಷ ಜನರು ಬಡವರು ಇದ್ದಾರೆ. ಈ ಬಡವರ ಪರ ನಾವು ವಾದ ಮಾಡಲಿಕ್ಕೆ ಈ ನಿಲುವಳಿ ಸೂಚನೆಯನ್ನು ತರದೇ ಇನ್ಯಾರ ಪರ ನಾವು ಮಾತನಾಡಬೇಕು ಎನ್ನುವುದನ್ನು ಈ ಸರ್ಕಾರ ನಮಗೆ ತಿಳಿಸಬೇಕಾಗುತ್ತದೆ. 1983 ರಲ್ಲಿ ನಾವು ಮೇಲೆ ತಿಳಿಸಿದ ಕಾರ್ಯಕ್ರಮವನ್ನು ತೆಗೆದುಕೊಂಡು ಬಂದೆವು. ನಂತರ ಮಾನ್ಯ ವೀರಪ್ಪ ಮೊಯಿಲಿಯವರ ಸರ್ಕಾರ ಬಂದಾಗ ಎರಡು ರೂಪಾಯಿಗೆ ಸಿಗತಕ್ಕಂಥ ಅಕ್ಕಿ ರೂ. 3-50 ದಿಂದ ರೂ. 5-40 ಪೈಸೆಗೆ ಬಂದು ನಿಂತಿತು. ಪುನಃ ಈ ರಾಜ್ಯದ ಬಡ ಮತದಾರರು 1994-95 ರಲ್ಲಿ ನಮಗೆ ಮತವನ್ನು ನೀಡಿ ಅಧಿಕಾರ ಕೊಟ್ಟರು. ಆಗ ಐದು ರೂಪಾಯಿ ನಲವತ್ತು ಪೈಸೆಗೆ ಒಂದು ಕೆ. ಜಿ. ಅಕ್ಕಿ ಏನು ಸಿಗುತ್ತಿತ್ತೋ ಅದನ್ನು ಪುನಃ ನಾವೇ ಮೂರು ರೂಪಾಯಿ ಐವತ್ತು ಪೈಸೆಗೆ ತೆಗೆದುಕೊಂಡು ಬಂದೆವು. ಅವರು ಆ ಕಾರ್ಡುಗಳನ್ನು ಕೂಡ ಬದಲಾವಣೆ ಮಾಡಿದ್ದರು. ಆದರೆ ನಾವು ಇದನ್ನು ಬದಲಾಯಿಸಲಿಲ್ಲ. ನಮ್ಮ ರಾಜ್ಯದಲ್ಲಿ ಇರತಕ್ಕಂಥ 67 ಲಕ್ಷ ಬಡ ಕುಟುಂಬಗಳಿಗೆ ಪ್ರತಿ ತಿಂಗಳು 10 ಕೆ. ಜಿ. ಅಕ್ಕಿ ಕೊಡಬೇಕು ಎಂದು ಮಾಡಿದೆವು. ಸಚಿವ ಸಂಪುಟದ ಸದಸ್ಯರಾಗಿರತಕ್ಕಂಥ ಮಾನ್ಯ ಎ. ಬಿ. ಪಾಟೀಲರು ಮತ್ತು ಎಸ್. ಎಸ್. ಪಾಟೀಲರು ಕೂಡ ಇಲ್ಲಿಯೇ ಇದ್ದಾರೆ, ಈ ವಿಚಾರ ಬಂದಾಗಲೂ ಕೂಡ there was no compromise in the Cabinet also ನಾವು ಕೂಡ ಫೈಟ್ ಮಾಡಿದ್ದೇವೆ. ಏಕೆಂದರೆ, ಇದೊಂದೆ ಬಡವರಿಗಾಗಿ ಮಾಡತಕ್ಕಂಥ ಕೆಲಸ. ಇದನ್ನು ಬಿಟ್ಟು ಬೇರೆ ಏನು ಮಾಡುವುದಕ್ಕಾಗುವುದಿಲ್ಲ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಸೀಮೆ-ಎಣ್ಣೆ,

ಅಕ್ಕಿ, ಗೋಧಿ, ರಾಗಿ, ಶಾಲೆಗೆ ಶಿಕ್ಷಕರ ನೇಮಕ, ಕುಡಿಯುವ ನೀರು, ವಿದ್ಯುತ್, ಬಸ್ ಚಾರ್ಜ್ ಕಡಿಮೆ ಮಾಡಿ ಎಂದು ಕೇಳುತ್ತಾರೆಯೇ ವಿನಃ ಇವುಗಳನ್ನು ಬಿಟ್ಟು ಬೇರೆ ಏನು ಕೇಳುವುದಿಲ್ಲ. ಆದರೆ ಇವತ್ತು ಕೇಂದ್ರ ಸರ್ಕಾರದವರು ಇದನ್ನೆಲ್ಲಾ ಹೆಚ್ಚು ಮಾಡಿದ್ದಾರೆ. ಕೇಂದ್ರ ಸರ್ಕಾರ ಮಾಡಿರುವುದನ್ನು ಸಮರ್ಥಿಸಿಕೊಳ್ಳುವುದಕ್ಕಾಗಿಯೇ ನಾನು ಇಲ್ಲಿಗೆ ಬಂದಿಲ್ಲ. ಕೇಂದ್ರ ಸರ್ಕಾರದವರು ಇವುಗಳ ಮೇಲೆ ಏರಿಸಿರುವ ಬೆಲೆಯನ್ನು ಇಳಿಸಬೇಕು ಹಾಗೂ ತೆಗೆದಿರುವ ಸಬ್ಸಿಡಿಯನ್ನು ಪುನಃ ಕೊಡಬೇಕು ಎನ್ನುವ ಒತ್ತಾಯವನ್ನು ನಾವು ಮಾಡಿದ್ದೇವೆ.

11.50 ಎ. ಎಂ

ನಾನೊಂದು ಹೆಜ್ಜೆ ಮುಂದಕ್ಕೆ ಹೋಗಿ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನಮ್ಮನ್ನೆಲ್ಲ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಮನಸ್ಸು ಸರ್ಕಾರಕ್ಕೆ ಇರಬೇಕಾಗಿತ್ತು. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಗೆ ಮುಖ್ಯಮಂತ್ರಿ ಮತ್ತು ಹಣಕಾಸಿನ ಮಂತ್ರಿಗಳನ್ನು ಕರೆದು ಪ್ಲಾನ್ ಸೈಜ್ ಬಗ್ಗೆ ಮತ್ತು ಹಣಕಾಸಿನ ಸ್ಥಿತಿಗತಿಗಳ ಬಗ್ಗೆ ಚರ್ಚೆ ಮಾಡಿದ ನಂತರ ಇದನ್ನು ಅನುಷ್ಠಾನಕ್ಕೆ ತರಬೇಕಾಗಿತ್ತೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾವು ಈಗಾಗಲೇ ಕೇಂದ್ರ ಸರ್ಕಾರದಲ್ಲಿ ಬಹಳಷ್ಟು ಪ್ರಧಾನಮಂತ್ರಿಗಳನ್ನು ನೋಡಿದ್ದೇವೆ. ಹಿಂದೆ ಇದ್ದಂಥ ಕೇಂದ್ರ ಸರ್ಕಾರಗಳು ಇವರೆಲ್ಲರನ್ನು ಸಭೆಗೆ ಕರೆದು ಇವರನ್ನು ಕೇಳಿ ಬೆಲೆಗಳನ್ನು ಜಾಸ್ತಿ ಮಾಡಿರತಕ್ಕಂಥ ನಿದರ್ಶನ ಇದೆಯೆ? ಯಾರು ಕೂಡ ಮಾಡಿಲ್ಲ. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯನ್ನು ಕರೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಸರಿ ಇದೆಯೆಂದು ನಾನು ಸಮರ್ಥನೆ ಮಾಡುತ್ತೇನೆ. ಆದ್ದರಿಂದ, ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಹೆಚ್ಚಿನ ಸಮಯಾವಕಾಶ ಬೇಡವೆ? ಇಲ್ಲಿ ನಾನು ಪಕ್ಷಾತೀತವಾಗಿ ಈ ವಿಚಾರವನ್ನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ವಕೀಲರು ನಮ್ಮ ಪರವಾಗಿ ವಾದಮಾಡುವುದನ್ನು ನಾನು ಬೇಡವೆಂದು ಹೇಳುತ್ತೇನೆಯೆ? ನಿಲುವಳಿ ಸೂಚನೆಗೆ ಅನುಮತಿ ಪಡೆದುಕೊಂಡು ಚರ್ಚೆಯನ್ನು ಆರಂಭ ಮಾಡುತ್ತಿದ್ದೀರಾ ಎಂದು ಕೇಳಿದೆನಷ್ಟೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಚರ್ಚೆ ಪ್ರಾರಂಭ ಮಾಡಿಲ್ಲ. ಚರ್ಚೆ ಮಾಡುವುದಕ್ಕೆ ಬಹಳಷ್ಟು ವಿಚಾರಗಳಿವೆ, ಅವುಗಳೆಲ್ಲವನ್ನೂ ಬ್ಯಾಗ್‌ನಿಂದ ಹೊರಕ್ಕೆ ತೆಗೆದೇ ಇಲ್ಲ. ಮೊದಲು ನಿಲುವಳಿ ಸೂಚನೆಗೆ ನಿಮ್ಮ ಮನಸ್ಸನ್ನು ಒಲಿಸಿಕೊಳ್ಳಬೇಡವೆ? ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಮತ್ತು ಮಾನ್ಯ ಬೈರೇಗೌಡರು ಹಾಗೂ ಮಾನ್ಯ ಮಹದೇವ್‌ಪ್ರಸಾದ್‌ರವರು ಮತ್ತು ಮಾನ್ಯ ಎ. ಬಿ. ಪಾಟೀಲ್‌ರವರು ನಿಲುವಳಿ ಸೂಚನೆಗೆ ಸಹಿ ಹಾಕಿದ್ದೇವೆ. ಈ ವಿಚಾರದಲ್ಲಿ ಬಿ. ಜೆ. ಪಿ. ಯವರು ಸಹ ಒಪ್ಪುತ್ತಾರೆ, ಈ ಸರ್ಕಾರ ಅಧಿಕಾರಕ್ಕೆ ಬಂದು ಬಸ್ ದರವನ್ನು ಜಾಸ್ತಿ ಮಾಡಿದರು ಎಂದು ಬಡವರು ಹೇಳುತ್ತಿದ್ದಾರೆ. ಬಸ್ಸಿನ ದರವನ್ನು ಜಾಸ್ತಿ ಮಾಡಿ, ಇವತ್ತಿನ ದಿವಸ ಶ್ವೇತಪತ್ರದ ಪುಟ ಸಂಖ್ಯೆ 35 ರಲ್ಲಿ ಒಂದು ರೀತಿ ಹೇಳಿದ್ದಾರೆ. ಇವರು ಹೇಳುವುದೊಂದು ಮಾಡುವುದೊಂದು, ನಮಗಂತು ಏನು ಅರ್ಥವಾಗುತ್ತಿಲ್ಲ. ಇವತ್ತಿನ ದಿವಸ ಮಾನ್ಯ ಚಂದ್ರೇಗೌಡರನ್ನು ಮತ್ತು ಮಾನ್ಯ

ರೋಷನ್‌ಬೇಗ್‌ರವರನ್ನು ಹಾಗೂ ಮಾನ್ಯ ದೇಶ್‌ಪಾಂಡೆಯವರನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಉಳಿದವರ ವಿಚಾರದ ಬಗ್ಗೆ ಹೇಳುತ್ತಿದ್ದೇನಷ್ಟೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಿಂದೆ ವಿರೋಧಪಕ್ಷದ ನಾಯಕರಾಗಿದ್ದಂಥ ಸಂದರ್ಭದಲ್ಲಿ ಇತ್ತ ಕಡೆ ಕುಳಿತುಕೊಂಡು ಕೆ. ಎಸ್. ಆರ್. ಟಿ. ಸಿ ಬಸ್ ದರವನ್ನು ಮತ್ತು ಕೆ. ಇ. ಬಿ. ದರವನ್ನು ಜಾಸ್ತಿ ಮಾಡಿ ನಿಮ್ಮ ಸರ್ಕಾರ ಬಡವರ ಹಣವನ್ನು ಲೂಟಿ ಮಾಡುತ್ತಿದೆ ಎಂದು ಪ್ರಸ್ತಾಪ ಮಾಡಿದ್ದರು

ಶ್ರೀ ಡಿ. ಬಿ. ಚಂದ್ರೇಗೌಡ : ಬಸ್ ದರರನ್ನು ನಿಮ್ಮ ಸರ್ಕಾರವೇ ಜಾಸ್ತಿ ಮಾಡಿತ್ತು.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಇವರ ಸರ್ಕಾರ ಅಧಿಕಾರಕ್ಕೆ ಬಂದು ಕಳೆದ ಆರು ತಿಂಗಳಿಂದೀಚೆಗೆ ಬಸ್‌ದರವನ್ನು ಕಡಿಮೆ ಮಾಡಿದ್ದು, ಕೆ. ಇ. ಬಿ ದರವನ್ನು ಇನ್ನು 15 ದಿವಸಗಳಲ್ಲಿ ಕಡಿಮೆ ಮಾಡುವುದಕ್ಕೋಸ್ಕರ ಇವರು ಅಧಿವೇಶನ ಯಾವಾಗ ಮುಗಿಯುತ್ತದೆ ಎಂದು ಕಾಯುತ್ತಿದ್ದಾರೆಂದು ಕಾಣುತ್ತದೆ. ನಾವು ಮೀಟರ್ ಹಾಕುತ್ತೇವೆಂದು ಹೇಳಿದ್ದಕ್ಕೆ ಇವರು ಮೀಟರ್ ಹಾಕುವುದಕ್ಕೆ ಹೊರಟಿದ್ದಾರೆ, ಇದು ಸಾಧ್ಯವಿಲ್ಲವೆಂದು ರೈತರನ್ನು ಮೇಲೆಬ್ಬಿಸಿದರು. ಆದರೆ ಇವತ್ತಿನ ದಿವಸ ಇವರು ಶ್ವೇತ ಪತ್ರದಲ್ಲಿ ಮಾತ್ರ ಬಹಳ ದೊಡ್ಡ ದೊಡ್ಡ ಹನಿ ಮುತ್ತುಗಳನ್ನು ಉದುರಿಸಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಇವರು ಪ್ರಸ್ತಾಪ ಮಾಡಿರುವುದನ್ನು ನೋಡಿದರೆ ಪ್ರಪಂಚದ ಆರ್ಥಿಕ ತಜ್ಞರುಗಳೆಲ್ಲರೂ ಹೇಳಿರತಕ್ಕಂಥ ವಿಚಾರಗಳೆಲ್ಲವನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕುರ್ಚಿಗೆ ತಕ್ಕಂತೆ ಮಾತನಾಡುತ್ತಿದ್ದೀರಲ್ಲ ನಿಮ್ಮದು ಯಾವ ಲೆಕ್ಕ ಇರಬಹುದು? ಬಡವರು ತಿನ್ನತಕ್ಕಂಥ ಹಸಿರು ಕಾರ್ಡಿನಲ್ಲಿ ಅಕ್ಕಿ ಬೆಲೆ ರೂ. 3.50 ಪೈಸೆ ಇದ್ದುದನ್ನು ರೂ. 6.50 ಪೈಸೆಗೆ ಜಾಸ್ತಿ ಮಾಡಿದ್ದೀರಿ. ಹಾಗೆಯೇ ಸೀಮೆ ಎಣ್ಣೆ ಬೆಲೆಯನ್ನು ರೂ. 2.50 ಪೈಸೆಯಿಂದ 5 ರೂಪಾಯಿಗಳವರೆಗೆ ಅಂದರೆ 100 ಪರ್ಸೆಂಟ್‌ನಷ್ಟು ದರವನ್ನು ಜಾಸ್ತಿ ಮಾಡಿದ್ದು ಮತ್ತು ಗೋಧಿ ಬೆಲೆಯನ್ನು ಸಹ ಜಾಸ್ತಿ ಮಾಡಿದ್ದೀರಿ ಎಂದು ಆಡಳಿತ ಪಕ್ಷದ ಸದಸ್ಯರು ಮುಂದಿನ ದಿನಗಳಲ್ಲಿ ಬರುವ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗೆ ಓಟು ಕೇಳುವುದಕ್ಕೆ ಹೋದಾಗ ಬಡವರು ಮತ್ತು ಪ್ರತಿಯೊಂದು ರೇಷನ್ ಶಾಪ್‌ನಲ್ಲಿ ಸಹ ನಿಮ್ಮನ್ನು ಕೇಳುತ್ತಾರೆ. ಆದ್ದರಿಂದ, ತಾವು ನನಗೆ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಟ್ಟರೆ ಬಹಳ ಮೃದುವಾದ ಪದಗಳನ್ನು ಆಮೇಲೆ ಮಾತನಾಡುತ್ತೇನೆ. ನಾನು ಕೇಳುವುದೇನೆಂದರೆ, ನಿಮ್ಮ ಮ್ಯಾನಿಫೆಸ್ಟೊದಲ್ಲಿ ಮತ್ತು ಭಾಷಣದಲ್ಲಿ ಬಡವರ ಪರವಾಗಿ ಕಾಂಗ್ರೆಸ್ ಇದೆ ಬಡವರಿಗೆ ಸಹಾಯ ಮಾಡುತ್ತೇವೆಂದು ಹೇಳುತ್ತಾ ಬಂದಿದ್ದೀರಿ. ಆದರೆ ಇವತ್ತು ಕಾಂಗ್ರೆಸ್ ನೀತಿಯ ವಿರುದ್ಧವಾಗಿ ನೀವೇಕೆ ಹೋಗುತ್ತಿದ್ದೀರಿ? ನೀವು ಹೇಳಿರತಕ್ಕಂಥ ಮಾತನ್ನು ಏಕೆ ನಡೆಸಿಕೊಡುತ್ತಿಲ್ಲ? ಬಿ. ಜೆ. ಪಿ. ಸರ್ಕಾರ ಬಂದು ಪಡಿತರ ಬೆಲೆಗಳನ್ನೆಲ್ಲಾ ಜಾಸ್ತಿ ಮಾಡಿದ್ದಾರೆಂದು ಇವತ್ತಿನ ದಿವಸ ನೀವೆಲ್ಲಾ ಬೀದಿಗೆ ಇಳಿದಿದ್ದೀರಿ. ಹಾಗೆಯೆ ವಿಧಾನಸೌಧದ ಸುತ್ತಲು ಇದಕ್ಕೆ ಸಂಬಂಧಪಟ್ಟಂತೆ ಸ್ವರ್ಗದಲ್ಲಿರತಕ್ಕಂಥವರ ಫೋಟೊಗಳನ್ನು ಹಾಕಿಕೊಂಡು ಬ್ಯಾನರ್‌ಗಳನ್ನು ಬರೆಸಿದ್ದಾರೆ. ಕೇಂದ್ರದವರು ಬೆಲೆಗಳನ್ನು ಜಾಸ್ತಿ ಮಾಡಿದ್ದಾರೆಂದು ನಾನು ಸಹ ಒಪ್ಪಿಕೊಳ್ಳುತ್ತೇನೆ. ಕೇಂದ್ರದ ಬಜೆಟ್ ಬಗ್ಗೆ ಮಾತನಾಡುವುದಕ್ಕೆ ನನಗೆ ಇಲ್ಲಿ ಅವಕಾಶ ಇಲ್ಲ. ಕೇಂದ್ರದ ಹಣಕಾಸಿನ ಪರಿಸ್ಥಿತಿ ಯಾವ ರೀತಿ ಇದೆ ಎಂಬುದು ತಮಗೂ ಗೊತ್ತಿಲ್ಲ. ಜನತಾದಳ ಸರ್ಕಾರ ಅಧಿಕಾರದಲ್ಲಿದ್ದಾಗ ಕೇಂದ್ರ ಸರ್ಕಾರ ಕೊಡತಕ್ಕಂಥ ಅಕ್ಕಿ ಬೆಲೆ ಮೇಲೆ 400 ಕೋಟಿ ಕೂಪಾಯಿಗಳ ಸಬ್ಸಿಡಿ

ಹಣವನ್ನು ರಾಜ್ಯದ ಹಣಕಾಸಿನ ಖಜಾನೆಯಿಂದ ಕೊಟ್ಟು ಅಕ್ಕಿಯ ಬೆಲೆಯನ್ನು ರೂ. 3.50 ಪೈಸೆ ಮಾಡಿದ್ದೆವು. ಆದರೆ ನೀವು ರೂ. 5.40 ಪೈಸೆ ಮಾಡಿದ್ದೀರಿ. ಮತ್ತೆ ನಾವು ಅಧಿಕಾರಕ್ಕೆ ಬಂದು ಇದನ್ನು 5 ರೂಪಾಯಿಗಳಿಗೆ ತೆಗೆದುಕೊಂಡು ಹೋಗುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಇದನ್ನು ನೀವ್ಯಾಕೆ ಮಾಡಬಾರದೆಂದು ಕೇಳುತ್ತಿದ್ದೇನೆ. ಸಬ್ಸಿಡಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದ ಕಾಂಟ್ರಿಬ್ಯೂಷನ್ ಏನೆಂಬುದು ನನಗೆ ಗೊತ್ತಿದೆ. 1999-2000ನೇ ಸಾಲಿನ ನಮ್ಮ ಲಾಸ್ಟ್ ಬಜೆಟ್‌ನಲ್ಲಿ 290 ಕೋಟಿ ರೂಪಾಯಿಗಳಷ್ಟು ಹಣವನ್ನು ಸಬ್ಸಿಡಿಗಾಗಿ ಇಟ್ಟಿದ್ದೆವು. ಮಾನ್ಯ ಸಚಿವರಾದಂಥ ಇನಾಂದಾರ್‌ರವರು ನಮ್ಮ ಜೊತೆಯಲ್ಲಿದ್ದುಥವರು. ಆದ್ದರಿಂದ ಯಾರ ಕಾಲದಲ್ಲಿ ಈ ಹಸಿರು ಕಾರ್ಡ್‌ನ್ನು ತರಲಾಗಿತ್ತೆಂಬುದನ್ನು ತಾವು ದಯವಿಟ್ಟು ಹೇಳಬೇಕು. ತಾವು ಅನೇಕ ಹೇಳಿಕೆಯನ್ನು ಕೊಟ್ಟಿದ್ದೀರಿ. ಆದರೆ ಕಳೆದ ಮೂರು ತಿಂಗಳಿಂದ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ತಮ್ಮ ಹೇಳಿಕೆಯಲ್ಲಿ ಕಾರ್ಡ್‌ಗಳ ಬಣ್ಣವನ್ನು ಬದಲಾವಣೆ ಮಾಡುತ್ತೀರೆಂದು ಹೇಳಿದ್ದೀರಿ. ಆದರೆ ಅದು ಇನ್ನೂ ಆಗಿಲ್ಲ. ಯಾವ ಬಣ್ಣವನ್ನು ಬದಲಾವಣೆಮಾಡುತ್ತೀರೆಂದು ಮತ್ತು ಅದಕ್ಕೆ ಯಾವ ಫೋಟೊ ಹಾಕುತ್ತೀರೆಂದು ಇವತ್ತಿನ ದಿವಸ ಜನರು ಕಾಯುತ್ತಿದ್ದಾರೆ. ಹಿಂದೆ ಯಾರ್ಯಾರದು ಫೋಟೊ ಹಾಕಿದ್ದೀರೊ, ಮುಂದೆ ಯಾರ ಫೋಟೊ ಹಾಕುತ್ತೀರೋ ಮತ್ತು ಯಾರ್ಯಾರ ಮಕ್ಕಳ ಫೋಟೊಗಳನ್ನು ಹಾಕುತ್ತೀರೆಂದು ನನಗಂತೂ ಗೊತ್ತಿಲ್ಲ. ತಾವು ದಯವಿಟ್ಟು ಆ ಮಹಾತ್ಮರ ಹೆಸರುಗಳನ್ನು ಹೇಳಿದರೆ, ಬಡವರು ಅವರ ಹೆಸರಿನಲ್ಲಾದರೂ ಅಕ್ಕಿ ಮತ್ತು ಗೋಧಿ ಹಾಗೂ ಸೀಮೆ ಎಣ್ಣೆ ಬೆಲೆಯನ್ನು ಸ್ವಲ್ಪ ನೆನೆಸಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಕಾರ್ಡ್‌ಗಳು ಅನರ್ಹರಿಗೆ ಹೋಗಿದೆ ಎನ್ನತಕ್ಕಂಥ ವಿಚಾರ ಎಲ್ಲರೂ ಕೂಡ ಒಪ್ಪಲೇ ಬೇಕು. ಅನರ್ಹರಿಗೆ ಹೋಗಿರತಕ್ಕಂಥ ಕಾರ್ಡುಗಳನ್ನು ಸ್ಟ್ರಿಕ್ಟ್ ಆಗಿ ಎನ್‌ಫೋರ್ಸ್‌ಮೆಂಟ್ ಮಾಡತಕ್ಕಂಥ ಶಕ್ತಿ ಫುಡ್ ಡಿಪಾರ್ಟ್‌ಮೆಂಟ್‌ಗೆ ಇದೆಯೆ? ಇವತ್ತಿನ ದಿವಸ ಯಾವುದೇ ಸರ್ಕಾರ ಬಂದರೂ ಮೇಲ್ಮಟ್ಟದಲ್ಲಿರತಕ್ಕಂಥ ನಿರ್ದೇಶಕರು ಮತ್ತು ಜಂಟಿ ನಿರ್ದೇಶಕರು ಪ್ರಾಮಾಣಿಕವಾಗಿ ಇದ್ದರೆ ಆಗುವುದಿಲ್ಲ. ತಹಶೀಲ್ದಾರ್ ಕಛೇರಿಯಲ್ಲಿ ಫುಡ್ ಇನ್ಸ್‌ಪೆಕ್ಟರ್ ಒಬ್ಬ ಇರುತ್ತಾನೆ. ಲಾಸ್ಟ್ ಟೈಂ ನಮ್ಮ ಸರ್ಕಾರ ಇದ್ದಾಗ ಇವರು ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಶಾಪ್‌ನಲ್ಲಿ ಹಸಿರು ಕಾರ್ಡ್‌ನ್ನು ಯಾರ್ಯಾರಿಗೆ ಕೊಡಬೇಕೊ ಅವರಿಗೆಲ್ಲ ನೀವೇ ಕೊಡಿ ಎಂದು ಹಸಿರು ಕಾರ್ಡ್‌ಗಳನ್ನು ಶಾಪ್‌ನವರಿಗೆ ಕೊಟ್ಟರು. ಇದರಿಂದ ಇವತ್ತಿನ ದಿವಸ ಹಸಿರು ಕಾರ್ಡ್‌ಗಳನ್ನು ಯಾರ್ಯಾರೊ ತೆಗೆದುಕೊಂಡಿದ್ದಾರೆ. ಹಸಿರು ಕಾರ್ಡುಗಳನ್ನು ರದ್ದು ಮಾಡತಕ್ಕಂಥ ವಿಚಾರದಲ್ಲಿ ನಮ್ಮದು ಸಂಪೂರ್ಣವಾದಂಥ ಸಹಕಾರ ಇದೆ. ಇದರಲ್ಲಿ ನೀವೇನೂ ಸಂಶಯ ಇಟ್ಟುಕೊಳ್ಳುವುದಕ್ಕೆ ಹೋಗಬೇಡಿ. ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಮೀಸಲಾತಿಯನ್ನು ಡಿಸಿಸಿ ಅಧ್ಯಕ್ಷರಿಗೆ ಹೇಳಿರುವ ಹಾಗೆ ಇಲ್ಲಿ ರೋಸ್ಟರ್ ಪದ್ಧತಿಯನ್ನು ಮಾಡುವುದಕ್ಕೆ ಹೊರಟಿದ್ದೀರಿ. ಅದೇ ರೀತಿಯಲ್ಲಿ ಕಾಂಗ್ರೆಸ್‌ಗೆ ಮತ ಕೊಡದೇ ಇರುವವರಿಗೆ ಹಸಿರು ಕಾರ್ಡ್ ಕೊಡುವುದಿಲ್ಲವೆಂದು ಮತ್ತು ಕಾಂಗ್ರೆಸ್‌ಗೆ ಮತ ಕೊಟ್ಟವರಿಗೆ ಮಾತ್ರ ಹಸಿರು ಕಾರ್ಡು ಕೊಡುತ್ತೇವೆಂದು ಹೇಳುವುದಕ್ಕೆ ಹೋಗಬೇಡಿ. ಇದನ್ನು ನಿಷ್ಪಕ್ಷಪಾತವಾಗಿ ಮಾಡಿ, ನಾವೆಲ್ಲಾ ಸಹಕಾರ ಕೊಡುತ್ತೇವೆ ಮತ್ತು ನಿಮಗೂ ಕೂಡ ಒಳ್ಳೆಯ ಹೆಸರು ಬರುತ್ತದೆ. ಇವತ್ತು ಕೇಂದ್ರ ಸರ್ಕಾರದವರು ಬೆಲೆಯನ್ನು ಹೆಚ್ಚು ಮಾಡಿದ್ದಾರೆ; ಆದರೆ ನಿಮ್ಮ ಸಬ್ಸಿಡಿ ಭಾಗವನ್ನು ಹೆಚ್ಚು ಮಾಡಿದ್ದೀರಾ ಎಂದು ಕೇಳುತ್ತಿದ್ದೇನೆ.

ಇದಕ್ಕೆ ನಿಮ್ಮ ಕಾಂಟ್ರಿಬ್ಯೂಷನ್ ಏನು? ಅಂದರೆ ಬಡವರ ಪರವಾಗಿ ಮಾತನಾಡಿದ್ದು ಕೇವಲ ಮೊಸಳೆ ಕಣ್ಣೀರಾ? ನಮ್ಮ ಸರ್ಕಾರ ಬಂದ ತಕ್ಷಣ ಬಡವರಿಗೆ ಸಹಾಯ ಮಾಡುತ್ತೇವೆಂದು ನೀವೇ ಹೇಳಿದ್ದೀರಿ. ಹಾಗಾದರೆ ನಿಮ್ಮ ಪ್ರಕಾರ ಬಡವರು ಯಾರು? ಇವತ್ತು ಒಕ್ಕಲಿಗರು, ಲಿಂಗಾಯಿತರು ಮತ್ತು ಹಿಂದುಳಿದ ವರ್ಗದವರು ಹಾಗೂ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರಲ್ಲಿ ಮತ್ತು ಇನ್ನುಳಿದ ಎಲ್ಲಾ ಜಾತಿಯಲ್ಲಿಯೂ ಜಮೀನು ಇಲ್ಲದೇ ಇರತಕ್ಕಂಥ ಬಡವರು ಇದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 2.5 ಕೋಟಿ ಜನ ಬಡವರಿದ್ದಾರೆಂದು ನಾವು ಗುರುತು ಮಾಡಿದ್ದೇವೆ. 20 ಸಾವಿರ ಕೋಟಿ ರೂಪಾಯಿಗಳನ್ನು 2.5 ಕೋಟಿ ಬಡ ಜನರಿಗೋಸ್ಕರ ಬಜೆಟ್‌ನಲ್ಲಿ ಇಟ್ಟಿದ್ದೀರಿ. ಮಾಹಿತಿ ತಂತ್ರಜ್ಞಾನಕ್ಕೆ 15 ಸಾವಿರದಿಂದ 30 ಸಾವಿರ ಕೋಟಿ ಬಗ್ಗೆಯೇ ಮಾತನಾಡುತ್ತಿದ್ದೀರಿ. ಇದನ್ನು ಮಾಡಿ, ನಾವೇನು ಬೇಡವೆಂದು ಹೇಳುವುದಿಲ್ಲ. ಏಕೆಂದರೆ, ಮಾಡ್ರನೈಜ್ ಮಾಡುವುದಕ್ಕೆ ನಾವು ವಿರೋಧ ಮಾಡುವುದಿಲ್ಲ. ಈ ಮೇಲ್ ಮೂಲಕ ಹಸಿರು ಕಾರ್ಡ್‌ನಲ್ಲಿ ಆಗತಕ್ಕಂಥ ಕರಪ್‌ಷನ್ ಪತ್ತೆ ಮಾಡಿದರೆ ನಮಗೆ ಇದರಿಂದ ಆಗತಕ್ಕಂಥ ಸಂತೋಷ ಬೇರೊಂದು ಇಲ್ಲ. ವಿಡಿಯೋ ಕಾನ್‌ಫರೆನ್ಸ್ ಮೂಲಕ ಡಿ. ಸಿ. ಯವರಿಂದ ಸುದ್ದಿಗಳನ್ನು ತೆಗೆದುಕೊಂಡು ಯಾವ್ಯಾವ ತಾಲ್ಲೂಕಿನಲ್ಲಿ ಹಸಿರು ಕಾರ್ಡ್‌ಗಳನ್ನು ಪಡೆದುಕೊಳ್ಳುವುದರಲ್ಲಿ ಯಾರ್ಯಾರಿಗೆ ಅನ್ಯಾಯವಾಗಿದೆಯೋ ಅವುಗಳೆಲ್ಲವನ್ನು ಸರಿ ಮಾಡುತ್ತೇವೆಂದು ಹೇಳಿದರೆ ನಾನು ಮತ್ತು ಮಾನ್ಯ ವೈ. ಕೆ. ರಾಮಯ್ಯನವರು ಸಹ ಬಹಳ ಸಂತೋಷ ಪಡುತ್ತೇವೆ. ಇವೆಲ್ಲವನ್ನು ನೀವು ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂಥದ್ದು ನಮಗೆ ಗೊತ್ತಿರುವ ವಿಚಾರ.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಸಿಂಧ್ಯಾರವರಿಂದ ಒಂದು ಮಾಹಿತಿಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಜೀವನಾವಶ್ಯಕವಾದಂಥ ವಸ್ತುಗಳ ಬೆಲೆ ಹೆಚ್ಚಾಗಿರುವುದಕ್ಕೆ ಕೇಂದ್ರ ಸರ್ಕಾರ ಸಬ್ಸಿಡಿಯನ್ನು ವಿಥ್‌ಡ್ರಾ ಮಾಡಿಕೊಂಡಿದೆ ಎನ್ನತಕ್ಕಂಥ ಸತ್ಯವನ್ನು ಹೇಳಿ ನಮಗೆ ಸಹಕಾರ ಮಾಡಿದ್ದೀರಿ. ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಕೇಂದ್ರ ಸರ್ಕಾರದ ತೀರ್ಮಾನ ಅಂದರೆ, ಅಲ್ಲಿ ಯಾರ್ಯಾರು ಆಡಳಿತ ಮಾಡುತ್ತಿದ್ದಾರೆಯೋ ಅವರೆಲ್ಲರೂ ಸೇರಿ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ನನಗೆ ಗೊತ್ತಿರಲಿಲ್ಲ. ಆದ್ದರಿಂದ ಇದರ ಬಗ್ಗೆ ನನಗೆ ಸ್ವಲ್ಪ ಮಾಹಿತಿ ಬೇಕು. ಕೇಂದ್ರ ಸರ್ಕಾರದ ತೀರ್ಮಾನದಿಂದ ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚಾಗಿದೆ ಎನ್ನುವುದು ನಿರ್ವಿವಾದ ಎಂದು ಅವರು ಒಪ್ಪಿಕೊಳ್ಳುವುದರ ಮುಖಾಂತರ ನಮಗೆ ಅವರು ಉಪಕಾರ ಮಾಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಕೇಂದ್ರ ಸರ್ಕಾರ ತೆಗೆದುಕೊಂಡಂಥ ತೀರ್ಮಾನದಲ್ಲಿ ಅವರು ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ ಎನ್ನತಕ್ಕಂಥ ಒಂದು ತತ್ವ ಇದೆ. ಆ ಒಂದು ಕೆಟ್ಟ ತೀರ್ಮಾನಕ್ಕೆ ಇವರು ಭಾಗ್ಯಸ್ಥರಲ್ಲವೆ? ಎರಡನೆಯದಾಗಿ, ಈ ಕೆಟ್ಟ ತೀರ್ಮಾನವನ್ನು ನೀವು ತೆಗೆದುಕೊಂಡಿದ್ದು, ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಬುದ್ಧಿ ಹೇಳಿ ಪ್ರಾರ್ಥನೆ ಮಾಡಿಕೊಂಡಿದ್ದೇವೆಂದು ಅವರು ಹೇಳುತ್ತಾರೆ. ಅಂದರೆ ಇವರ ಮಾತನ್ನು ಕೇಳದೇ ಇದ್ದರೆ ಇವರ ಪಕ್ಷ ಏನು ಮಾಡುತ್ತೆ? ಬಡವರಿಗೆ ಅನ್ಯಾಯವಾಗುವಂಥ ಕಾಯಕ್ರಮಗಳಿಗೆ ಕೈ ಹಾಕಿರುವ ಕೇಂದ್ರ ಸರ್ಕಾರ ಇವರ ಬುದ್ಧಿವಾದಕ್ಕೆ ಸೊಪ್ಪು ಹಾಕದೇ ಇದ್ದರೆ ಅಥವಾ ಇವರ ಮಾತನ್ನು ಕೇಳದೇ ಇದ್ದರೆ, ಇವರಿಗೆ

ಗೌರವ ಕೊಡದೇ ಇದ್ದರೆ ಇವರ ಪಕ್ಷ ಏನು ಮಾಡುತ್ತೆ? ಇಷ್ಟನ್ನು ತಾವು ದಯಮಾಡಿ ತಿಳಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರೇ, ಪೂರ್ಣ ಪ್ರಮಾಣದಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಿರುವುದಿಲ್ಲ. ನೀವು ಅವರಿಗೆ ಉತ್ತರವನ್ನು ಕೊಡುವುದು, ಅವರು ನಿಮಗೆ ಉತ್ತರವನ್ನು ಕೊಡುವುದು ಬೇಕಾಗಿರುವುದಿಲ್ಲ. ನೀವು ಈಲ್ಡ್ ಆಗುವುದು ಬೇಡ, ನೀವು ಮಾತನಾಡಲು ಪ್ರಾರಂಭ ಮಾಡಿ 15 ನಿಮಿಷಗಳಾಯಿತು.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನನಗೆ ನೀವು ಮಾತನಾಡುವುದು ಬೇಡವೆಂದರೆ, ನಾನು ಕುಳಿತುಕೊಂಡು ಬಿಡುತ್ತೇನೆ.

ಅಧ್ಯಕ್ಷರು : ನಾನು ನಿಮಗೆ ಮಾತನಾಡಲು ಬೇಡವೆಂದು ಹೇಳಲಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಪಾರ್ಲಿಮೆಂಟರಿ ಪ್ರಾಕ್ಟಿಸ್‌ನಲ್ಲಿ ಈಲ್ಡ್ ಆಗಬೇಕಾಗುತ್ತದೆ. He is a senior leader. he is one of the founding piller of our party. He is a party to all our decisions.

ಅಧ್ಯಕ್ಷರು : ಚರ್ಚೆ ಎಲ್ಲಿಗೋ ಹೊರಟು ಹೋಗುತ್ತಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಚರ್ಚೆ ಎಲ್ಲಿಗೋ ಹೋಗುವುದಿಲ್ಲ. ತಾವು ಸರಿಯಾದ ದಾರಿಯಲ್ಲಿಯೇ ನಡೆಸಿಕೊಂಡು ಹೋಗುತ್ತಿದ್ದೀರಿ. You are on the right track.

ಶ್ರೀ ವೈ. ಕೆ. ರಾಮಯ್ಯ : ನನ್ನ ಬಗ್ಗೆ ನೀವು ವ್ಯಾಖ್ಯಾನ ಕೊಡುವುದು ಬೇಡ ಸ್ವಾಮಿ. ನಾನು ಕೇಳಿದ ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಕೊಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ : 1983 ರಿಂದ ನಮ್ಮ ಪಕ್ಷದ ಆಡಳಿತ ಇದ್ದಾಗ ಕೇಂದ್ರ ಸರ್ಕಾರದವರು ಮಾಡಿರತಕ್ಕಂಥ ಕ್ರಮಗಳು, ಈಗ ಮಾನ್ಯ ವೈ. ಕೆ. ರಾಮಯ್ಯನವರು ಇರತಕ್ಕಂಥ ಪಾರ್ಟಿಯವರು ಇದ್ದರು. ಆ ಸಂದರ್ಭದಲ್ಲಿ ಕೂಡ ನಾವು ರಾಜ್ಯ ಸರ್ಕಾರದಿಂದ ಸಬ್ಸಿಡಿಯನ್ನು ಕೊಟ್ಟಿರುತ್ತೇವೆ. ಈಗ ನಾವು ಕೇಳತಕ್ಕಂಥದ್ದು, ಈಗ ನಮ್ಮದೇ ಸರ್ಕಾರ ಇದೆ. ನಾವು ಅವರಿಗೆ ಒತ್ತಾಯವನ್ನು ಮಾಡಿರುತ್ತೇವೆ. There is no alternative to vajpayee Government ಸರ್ಕಾರವನ್ನು ರಚನೆ ಮಾಡುವುದಕ್ಕೆ ಯಾರಿಂದಲೂ ಆಗಲಿಲ್ಲ, ಇಲ್ಲದಿದ್ದರೆ ಪಾರ್ಲಿಮೆಂಟರಿ ಚುನಾವಣೆ ಬರುತ್ತಿರಲಿಲ್ಲ. ಯಾರು ಯಾವ ಯಾವ ಸಂಖ್ಯೆಗಳು ಕೊಟ್ಟರು, ಏನೇನು ಆಯಿತು ದೇಶದ ಸ್ಥಿತಿಯಲ್ಲಿ, ಯಾವ ಯಾವ ಸಂಖ್ಯೆ ಇರಲಿಲ್ಲ ಎನ್ನುವಂತ ವಿಚಾರ ಜಗತ್ತಿಗೇ ಗೊತ್ತಿದೆ. ಅವರ ನಾಯಕತ್ವ ಅನಿವಾರ್ಯವಾಯಿತು. ಆದ್ದರಿಂದ ಇವತ್ತು ನಾನು ರಾಜ್ಯ ಸರ್ಕಾರವನ್ನು ಆಗ್ರಹ ಮಾಡುತ್ತೇನೆ. ಈ ಬಡವರ ವಿರೋಧಿ ನೀತಿಗೆ ನೀವು ಏಕೆ ಕೈ ಹಾಕುವುದಕ್ಕೆ ಹೊರಟಿದ್ದೀರಾ? ನೀವು ಅಧಿಕಾರಕ್ಕೆ ಬಂದು ಇನ್ನು ಆರು ತಿಂಗಳು ಆಗಿರುವುದಿಲ್ಲ. ಬಡವರ ಪರವಾಗಿ ಇರುವಂತ ಪಕ್ಷದವರು ಎಂದು ನೀವು ಭಾಷಣ ಮಾಡತಕ್ಕಂಥವರು, 300 ಕೋಟಿ ರೂಪಾಯಿಗಳನ್ನು ನೀವು ರಾಜ್ಯ ಸರ್ಕಾರದಿಂದ ಏಕೆ ಸಬ್ಸಿಡಿಯನ್ನು ಕೊಡಬಾರದು? ಕೇಂದ್ರ ಸರ್ಕಾರದವರು ಬೆಲೆ

ಜಾಸ್ತಿ ಮಾಡಿದ್ದಾರೆ, ಎಲ್ಲಾ ಹೊರೆಯನ್ನು ನೀವು ಏಕೆ ಬಡವರ ಪರವಾಗಿ ಹಾಕುತ್ತಿದ್ದೀರಾ? ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾನು ಇವತ್ತು ಎಲೆಕ್ಟ್ರಾನಿಕ್ ಗೌರ್ನಮೆಂಟ್ ಮಾಡುತ್ತಿದ್ದೇನೆ ಎಂದು. ಅದರ ಮುಖಾಂತರ ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧವನ್ನು ಸಾರಿದ್ದಾರೆ, ಇದರಿಂದ ನಮಗೆ ಬಹಳ ಸಂತೋಷ. ಎಕ್ಸೈಸ್ ಡಿಪಾರ್ಟ್‌ಮೆಂಟ್ ವಿಷಯ ಬಂದಾಗ ಯಾರ್ಯಾರ ಸ್ಟೇಟ್‌ಮೆಂಟ್ ಏನೇನು ಎನ್ನುವುದನ್ನು ಧರ್ಮಯುದ್ಧದ ವಿವಿಧ ಸಣ್ಣ ಯುದ್ಧಗಳ ಬಗ್ಗೆ ಚರ್ಚೆ ಮಾಡೋಣ. ನಾನು ನಿಮ್ಮನ್ನು ಇಷ್ಟೇ ಕೇಳುತ್ತಿರುವುದು, ನಿಮ್ಮ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಮಾನ್ಯ ಶಂಕರೇಗೌಡರು ನಮ್ಮ ವಿಚಾರದ ಬಗ್ಗೆ ಒಪ್ಪಿಕೊಳ್ಳುತ್ತಾರೆ. ನಾವು ಮಾಡನಾಡಲಿ ಎನ್ನತಕ್ಕಂಥ ಮನಸ್ಸು ಅವರಿಗೆ ಇದೆ. ಏಕೆಂದರೆ, ಅವರ ಕ್ಷೇತ್ರದಲ್ಲಿ ಬಡವರು ಬಹಳ ಜನ ಇದ್ದಾರೆ. ಇದನ್ನು ಏಕೆ ಎಂದು ನೀವು ಕೇಳುವುದಕ್ಕೆ ಹೋಗಬೇಡಿ, ಏಕೆಂದರೆ, ನೀವು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯ ಚುನಾವಣೆಯಲ್ಲಿ ಗೆಲ್ಲಬೇಕಾಗುತ್ತದೆ. ನಿಮಗೆ ಬಡವರು ಕೇಳುತ್ತಾರೆ. ನೀವು ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡುವ ಅವಶ್ಯತೆ ಇರುವುದಿಲ್ಲ. ದಯಮಾಡಿ ಮಾನ್ಯ ಆಹಾರ ಮಂತ್ರಿಗಳು We will roll back the prices ಎಂದು ಹೇಳಲಿ. ಏಪ್ರಿಲ್ ಮೊದಲನೇ ದಿನಾಂಕಕ್ಕೆ ಕೇಂದ್ರ ಸರ್ಕಾರದವರು ಮುಖ್ಯ ಮಂತ್ರಿಗಳ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗನ್ನು ಕರೆಯಬೇಕೆಂದು ಒತ್ತಾಯವನ್ನು ಮಾಡಿದ್ದಾರೆ. ನಿಷ್ಕರುಣೆಯಿಂದ ಕೇಂದ್ರ ಸರ್ಕಾರದವರು ಮಾಡಿದ್ದಾರೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಮೇಲೆ ಎಲ್ಲಾ ಪಾರ್ಟಿಯವರು ಒತ್ತಡವನ್ನು ತರುತ್ತಿದ್ದೇವೆ. ಸಡನ್ ಆಗಿ ಮಾನ್ಯ ಡಿ. ಬಿ. ಚಂದ್ರೇಗೌಡರು ಪತ್ರಿಕಾ ಹೇಳಿಕೆಯನ್ನು ಕೊಟ್ಟು ಏಪ್ರಿಲ್ ಒಂದನೇ ತಾರೀಖಿನಿಂದ ಜಾರಿಗೆ ಬರುತ್ತದೆ ಎಂದು 67 ಲಕ್ಷ ಬಡ ಕುಟುಂಬಗಳಿಗೆ ಕಣ್ಣೀರು ಹಾಕುವ ಹಾಗೆ ಮಾಡಿರುತ್ತಾರೆ. 10 ಕೆಜಿ ಕೊಡುವ ಅಕ್ಕಿಯನ್ನು 20 ಕೆಜಿ ಕೊಡುತ್ತಿದ್ದೇವೆ. ಅದನ್ನು ಡಬಲ್ ಮಾಡಿದ್ದೇವೆ, ಅದರಿಂದ ಸಬ್ಸಿಡಿ ಕೂಡ ಡಬಲ್ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ವಾಸ್ತವಾಂಶದಲ್ಲಿ ತಿಂಗಳಲ್ಲಿ ಡಬಲ್ ಮಾಡಿರುವುದಿಲ್ಲ. ಡಬಲ್ ಮಾಡತಕ್ಕಂಥಾದ್ದು ಇನ್ನೊಂದು ಮಾಡತಕ್ಕಂಥಾದ್ದು, ಅದು ಬೇರೆ ವಿಚಾರ. ಇದಕ್ಕೆ ಪಕ್ಷಾತೀತವಾಗಿ ಪರಿಹಾರದ ಸಲುವಾಗಿ ವಿಚಾರ ಮಾಡಬೇಕಾಗುತ್ತದೆ. ಪಕ್ಷಾತೀತವಾಗಿ ವಿಚಾರವನ್ನು ಮಾಡಿದಾಗ ಎಲ್ಲೋ ಒಂದು ಹಂತಕ್ಕೆ ನಿಮಗೆ ಟೀಕೆಯನ್ನು ಮಾಡದೆ ನೀವು ಮಾಡತಕ್ಕಂಥ ಕಾರ್ಯಕ್ರಮಗಳು ರಿಸೋರ್ಸ್ ಮೊಬಿಲೈಜೇಷನ್, ಯಾವ ಸೆಕ್ಟಾರ್‌ಗೆ ನೀವು ಹಣವನ್ನು ಖರ್ಚು ಮಾಡಬೇಕು, ಇದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಈಗ ಬಡವರಿಗೆ, ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗದವರಿಗೆ ಪರಿಶಿಷ್ಟ ಜಾತಿಯವರಿಗೆ 2 ಲಕ್ಷ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದ್ದೀರಿ; ಇದನ್ನು ನಾವು ಸ್ವಾಗತ ಮಾಡಿದ್ದೇವೆ. We appreciate the Chief Minister. ಇನ್ನು 12 ತಿಂಗಳಲ್ಲಿ ಕರ್ನಾಟಕದಲ್ಲಿ 2 ಲಕ್ಷ ಬಡಕುಟುಂಬಗಳಿಗೆ ಈ ಸರ್ಕಾರವು ಮನೆಗಳನ್ನು ಕಟ್ಟಿಕೊಟ್ಟರೆ ಅದಕ್ಕಿಂತ ಸಾಧನೆ ಇನ್ನೇನು ಇದೆ; ಇದು ಬಹಳ ದೊಡ್ಡ ಸಾಧನೆಯಾಗಿದೆ. ಅದೇ ರೀತಿಯಲ್ಲಿ ಬಡವರ ಹೊಟ್ಟೆಗೆ ತಣ್ಣೀರನ್ನು ಹಾಕುವಂತಹ ಕೆಲಸವನ್ನು ಏಕೆ ನೀವು ಮಾಡುತ್ತಿದ್ದೀರಿ? ಅವರೇನೋ ಮಾಡಿದ್ದಾರೆ, ಇದರಲ್ಲಿ ನಿಮ್ಮ ಕಾಂಟ್ರಿಬ್ಯೂಷನ್ ಏನು? ರ‍್ಯಾಲಿ ಮಾಡುವುದೇ ನಿಮ್ಮದಾ? ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗನ್ನು ಕರೆದೆವು ಎಂದು ಸುಮ್ಮನಾಗುವುದೇ ನಿಮ್ಮ ಕೆಲಸವೇ? ಇದರಲ್ಲಿ ನಿಮ್ಮದಾದರೂ ಪಾರ್ಟಿಸಿಪೇಷನ್ ಇದೆಯೇ?

ನನಗೊಂದು ಮಾರಲ್ ರೈಟ್ಸ್ ಇದೆ, ನಾವಿದ್ದಂತಹ ಸರ್ಕಾರದಲ್ಲಿ ಮಾನ್ಯ ಜೆ. ಹೆಚ್. ಪಟೇಲರ ಅಥವಾ ಮಾನ್ಯ ದೇವೇಗೌಡರ ಸರ್ಕಾರವಿರಬಹುದು, ಶ್ರೀ ಬೊಮ್ಮಾಯಿ, ಶ್ರೀ ಹೆಗಡೆಯವರದ್ದು ಇರಬಹುದು, ಆ ಸರ್ಕಾರದಲ್ಲಿ ಈ ವರ್ಗದ ಜನಗಳಿಗೆ ಸಬ್ಸಿಡಿಯನ್ನು ಕೊಡುವಂತಹ ಸಂದರ್ಭದಲ್ಲಿ ನಾವು ಕಾಂಟ್ರಿಬ್ಯೂಟ್ ಮಾಡಿದ್ದೇವೆ. ಸುಮಾರು 300 ರಿಂದ 400 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ We have given as subsidy to the section of the society. ಇವತ್ತು ಪಡಿತರ ಬೆಲೆಗಳು ವಿಶೇಷವಾಗಿ ಅಕ್ಕಿ, ಗೋಧಿ ಸೀಮೆ ಎಣ್ಣೆಯ ಬೆಲೆಗಳು ಇದಕ್ಕೆ ರಾಜ್ಯ ಸರ್ಕಾರದ ಕಾಂಟ್ರಿಬ್ಯೂಷನ್‌ನ್ನು ಕೊಟ್ಟು ಕೇಂದ್ರ ಸರ್ಕಾರದ ಸಂಪೂರ್ಣವಾದ ಹೊರೆಯನ್ನು ರಾಜ್ಯ ಸರ್ಕಾರದವರು ತೆಗೆದುಕೊಂಡು ಬಡವರಿಗೆ ಸ್ವಲ್ಪ ರಿಲೀಫ್‌ನ್ನು ಕೊಡುವುದಕ್ಕೆ ಒತ್ತಾಯ ಮಾಡುವ ದೃಷ್ಟಿಯಿಂದಾಗಿ ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ದಯಮಾಡಿ ತಾವು ಈ ನಿಲುವಳಿ ಸೂಚನೆಯ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಅನುಕೂಲವಾಗುತ್ತದೆ. ಬೇರೆ ರಾಜ್ಯಗಳಲ್ಲಿ ಏನಿದೆ? What is the total quantity we are getting? What is the quantity we are distributing? ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಎಲ್ಲಾ ಸದಸ್ಯರಿಗೂ ಕಳಕಳಿ ಇದೆ, ತಾವು ಅವಕಾಶವನ್ನು ಕೊಡಬೇಕು, ಈ ನಿಲುವಳಿ ಸೂಚನೆಯನ್ನು ಮಂಡಿಸುವುದಕ್ಕೆ ತಾವು ಅನುಮತಿಯನ್ನು ಕೊಡುತ್ತೀರೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

+ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀ ಪಿ. ಜಿ. ಆರ್. ಸಿಂಧ್ಯಾರವರು ಒಂದೆರಡು ಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಬಹಳ ಮುಖ್ಯವಾದುದೇನೆಂದರೆ, "ಶ್ರೀ ಚಂದ್ರೇಗೌಡರು ಪತ್ರಿಕೆಯ ಸಂದರ್ಶನವನ್ನು ದಿಢೀರನೇ ಮಾಡಿ ಹೇಳಿದ್ದಾರೆ; ಇಷ್ಟು ಅವಸರ ಅವರಿಗೇನಿತ್ತು? ಇದರಿಂದಾಗಿ 67 ಲಕ್ಷ ಕುಟುಂಬಗಳಿಗೆ ಹೊಟ್ಟೆಯ ಮೇಲೆ ತಣ್ಣೀರನ್ನು ಎರಚಿದ್ದೀರಿ, ನೀವು ಪ್ರಣಾಳಿಕೆಯಲ್ಲಿ ಹೀಗೆ ಹೇಳಿದ್ದೀರಿ, ಆದರೆ ಕಾರ್ಯವನ್ನು ಹೀಗೆ ಮಾಡುತ್ತಿದ್ದೀರಿ" ಇವೆಲ್ಲಾ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಶ್ರೀಮಾನ್ ರಾಮಯ್ಯನವರು ಹೇಳಿದ ಹಾಗೆ, ಕೇಂದ್ರ ಸರ್ಕಾರದವರು ಮಾರ್ಚ್ 29 ರಂದು ಬೆಲೆಗಳನ್ನು ಏರಿಸಿ 1ನೇ ಏಪ್ರಿಲ್ ತಿಂಗಳಿನಿಂದ ಇದನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ. ಅದಕ್ಕಾಗಿ ನಾವು ತುರ್ತಾಗಿ ಮಂತ್ರಿಮಂಡಲದ ಸಭೆಯನ್ನು ಕರೆದು ಈ ಪರಿಸ್ಥಿತಿಯನ್ನು ನಿಭಾಯಿಸುವುದು ಹೇಗೆ? ಎನ್ನುವುದರ ಬಗ್ಗೆ ಸರ್ಕಾರವು ಆಲೋಚನೆಯನ್ನು ಮಾಡಿತು. ಅಲ್ಲಿ ಎಷ್ಟು ಬರಬಹುದು, ಎಷ್ಟು ಸಬ್ಸಿಡಿ ಬೇಕಾಗುತ್ತದೆ, ನಾವು ಸಬ್ಸಿಡಿಯನ್ನು ಕೊಟ್ಟಿದ್ದೇವೆ, ಇದರಲ್ಲಿ ನಿಮ್ಮ ಸಬ್ಸಿಡಿ ಎಷ್ಟು? ನೀವೇನು ಬಡವರ ಪರವಾಗಿ ಮಾಡಿದ್ದೀರಿ, ಹಿಂದಿನಿಂದಲೂ ರಾಜ್ಯ ಸರ್ಕಾರದ ಸ್ಥಿತಿ ಆಯವ್ಯಯವನ್ನು ಮಂಡನೆ ಮಾಡಿದಾಗ ಇಂತಹ ದೊಡ್ಡ ಆಘಾತವು ಕೇಂದ್ರ ಸರ್ಕಾರದಿಂದ ಬರುತ್ತದೆ ಎಂದು ಯಾರು ಸಹ ನಿರೀಕ್ಷೆಯನ್ನು ಮಾಡಿರಲಿಲ್ಲ. ನಾವು ನಮ್ಮ ಆಯವ್ಯಯವನ್ನು ಮಂಡನೆ ಮಾಡಿ, ಸರಿಸುಮಾರು 290 ಕೋಟಿ ರೂಪಾಯಿಗಳಷ್ಟು ಡಿಫಿಸಿಟಿ ಇರುವಂತಹ ಸಂದರ್ಭದಲ್ಲಿ "ಉರಿಯುವ ಗಾಯಕ್ಕೆ ಉಪ್ಪು ಹಾಕಿದರೆಂದು" ಹೇಳಿ ಕೇಂದ್ರ ಸರ್ಕಾರದ ಇಂತಹ ನಿಷ್ಕಾರಣವಾದಂತಹ ತೀರ್ಮಾನವನ್ನು ತೆಗೆದುಕೊಂಡಿತು. ಇದರಲ್ಲಿ ಬಹಳ ಮುಖ್ಯವಾದುದೇನೆಂದರೆ, ಬೆಲೆಯನ್ನು

ಜಾಸ್ತಿ ಮಾಡಿದ್ದರಿಂದ, ಇದುವರೆಗೆ ರಾಜ್ಯ ಸರ್ಕಾರ 305 ಕೋಟಿ ರೂಪಾಯಿಗಳನ್ನು ಸಬ್ಸಿಡಿ ಕೊಡುತ್ತಿತ್ತು. ಈಗ ಹೊಸದಾಗಿ ಕೊಟ್ಟಿದ್ದರಿಂದ ಸುಮಾರು 245 ಕೋಟಿ ರೂಪಾಯಿಗಳು ಜಾಸ್ತಿಯಾಗುತ್ತದೆ ಅಂದರೆ 550 ಕೋಟಿ ರೂಪಾಯಿಗಳಷ್ಟು ಈ ಸಬ್ಸಿಡಿಯ ಸ್ಕೀಮ್‌ನಿಂದ ರಾಜ್ಯ ಸರ್ಕಾರದವರು ತುಂಬಿಕೊಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ ಇವರು ಆ ಮಾತನ್ನು ಹೇಳಿದರು, ಇದನ್ನು ನಾವು ಹೇಳಲಿಲ್ಲ. ನಾವು 10ನ್ನು 20 ಕೆಜಿ ಮಾಡಿದ್ದೇವೆಂದು ಹೇಳಲಿಲ್ಲ. ಮಾನ್ಯ ಸಿಂಧ್ಯಾರವರು ತಪ್ಪು ತಿಳಿದ ಹಾಗೆ ಕಾಣುತ್ತದೆ. ತಾವು 10 ಕೆಜಿ ಅಕ್ಕಿಯನ್ನು 20 ಕೆಜಿ ಅಕ್ಕಿ ಮಾಡಿದ್ದೇವೆಂದು ಹೇಳಿದ್ದೀರಲ್ಲಾ ಆ ಮಾತನ್ನು ನಾವು ಹೇಳಿದ್ದಲ್ಲಾ. ಕೇಂದ್ರ ಸರ್ಕಾರದ ತೀರ್ಮಾನವನ್ನು ನಾವು ಇಲ್ಲಿ ಹೇಳಿದ್ದೇವೆ. ಒಂದು ಕಡೆ 10 ಕೆಜಿ ಇರುವುದನ್ನು 20 ಕೆಜಿ ಮಾಡುವುದು, ಇನ್ನೊಂದು ಕಡೆ 3-50 ಪೈಸೆ ಇದ್ದದನ್ನು 5-90 ಪೈಸೆಗೆ ಏರಿಸುವುದು ಇದು ಕೇಂದ್ರ ಸರ್ಕಾರದ ತೀರ್ಮಾನ. ರಾಜ್ಯ ಸರ್ಕಾರದ ರಿಸೋರ್ಸ್‌ಗಳು ಏನು? ನಮ್ಮ ಇತಿಮಿತಿಗಳೇನು, ನಮಗಿಂತ ಹೆಚ್ಚಾಗಿ ಅವರಿಗೆ ಇದರ ಬಗ್ಗೆ ಗೊತ್ತಿದೆ. ಸಿಂಧ್ಯಾರವರು, ಶ್ರೀ ಸೋಮಶೇಖರ್‌ರವರು, ಶ್ರೀ ಎಸ್. ಎಸ್. ಪಾಟೀಲರು ಈ ಸದನದಲ್ಲಿ ಕುಳಿತಿರುವಂತಹ ಘಟಾನುಘಟಿಗಳಿಗೆ ರಾಜ್ಯದ ಆರ್ಥಿಕ ಸ್ಥಿತಿಯ ಪರಿಪೂರ್ಣತೆಯ ಅರಿವಿದೆ. ಅವರುಗಳು ಅರಿವಿದ್ದೇ ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಕರ್ನಾಟಕದಲ್ಲಿ 68 ಲಕ್ಷ ಹಸಿರು ಕಾರ್ಡುಗಳಿವೆ, ಅದರಲ್ಲಿ ಕೇಂದ್ರ ಸರ್ಕಾರದವರು ಮಾನ್ಯ ಮಾಡಿರುವುದೆಷ್ಟು ಕೇವಲ 28,75,000 ಮಾತ್ರ.

ಶ್ರೀ ಡಿ. ಬಿ. ಚಂದ್ರೇಗೌಡ : ನಮ್ಮ ರಾಜ್ಯ ಸರ್ಕಾರದವರು ಕೊಟ್ಟಿರತಕ್ಕಂತಹ 68 ಲಕ್ಷ ಹಸಿರುಕಾರ್ಡುಗಳಲ್ಲಿ, ಉಳಿದಿರತಕ್ಕಂಥ 36 ಲಕ್ಷ ಕಾರ್ಡುಗಳಿಗೆ ಪೂರ್ಣ ಪ್ರಮಾಣದ ಸಬ್ಸಿಡಿಯನ್ನು ರಾಜ್ಯ ಸರ್ಕಾರವು ಒದಗಿಸಿಕೊಡಬೇಕಾಗುತ್ತದೆ. ಯಾರ್ಯಾರ ಹಸಿರು ಕಾರ್ಡುಗಳಲ್ಲಿ ದೋಷವಿದೆಯೋ, ಮತ್ತೇ ಯಾರ್ಯಾರಿಗೆ ಅನಗತ್ಯವಾದ ಹಸಿರುಕಾರ್ಡುಗಳು ಸಿಕ್ಕಿದೆ ಅವುಗಳನ್ನು ಗುರುತಿಸಿ ಎಂದು ಹೇಳಿದ್ದಾರೆ, ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಪರಿಶೀಲನೆಯನ್ನು ನಡೆಸುವ ಬಗ್ಗೆ ಹೇಳಿದ್ದಾರೆ. ಮಾನ್ಯ ರಾಮಯ್ಯನವರು ಒಂದು ಪ್ರಶ್ನೆಯನ್ನು ಬಹಳ ಸೊಗಸಾಗಿ ಕೇಳಿದರು. ಅದಕ್ಕಾಗಿ ನಾನು, ನಮ್ಮ ವಕಾಲತ್ತನ್ನು ನೀವೇ ವಹಿಸಿದ್ದೀರಿ ಎಂದು ಹೇಳಿದೆ. ಆದ್ದರಿಂದ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ವಿಚಾರದ ಬಗ್ಗೆ ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡಬೇಕಾಗಿರುವುದು ಸಹಜವಾದುದು. ಇದರ ಬಗ್ಗೆ ಕೇಂದ್ರ ಸರ್ಕಾರವು ಏತಕ್ಕಾಗಿ ದಿಢೀರನೆ ತೀರ್ಮಾನವನ್ನು ತೆಗೆದುಕೊಂಡಿತು?

ಶ್ರೀ ಪಿ. ಜಿ. ಆರ್. ಸಿಂಧ್ಯ : ತಾವು ಒಂದು ನಿಮಿಷ ಯೀಲ್ಡ್ ಆಗಿ, ಹಿಂದೆ ಕೇಂದ್ರ ಸರ್ಕಾರ ಇದ್ದಾಗ, ಅದು ಯಾವುದೇ ಪಾರ್ಟಿಯಾಗಲಿ, ಈ ರೀತಿಯಾಗಿ ಬೆಲೆಗಳನ್ನು ಏರಿಸುವಂತಹ ಸಂದರ್ಭದಲ್ಲಿ ನಾವು 2-3 ತಿಂಗಳುಗಳು ಬೆಲೆಯನ್ನು ಏರಿಸಲಿಲ್ಲ. ನಾವೆಲ್ಲರೂ ಒಟ್ಟಿಗೆ ಕುಳಿತುಕೊಂಡು ಚರ್ಚೆ ಮಾಡಬೇಕೆಂದು ತಾವು ಹೇಳುತ್ತಿದ್ದೀರಿ. ಕೇಂದ್ರ ಸರ್ಕಾರದವರು 29ನೇ ತಾರೀಖು ಬೆಲೆಯನ್ನು ಜಾಸ್ತಿ ಮಾಡಿದರು ಎಂದು ಹೇಳಿ ನೀವು ಮೊದಲನೇ ಏಪ್ರಿಲ್‌ನಿಂದ ಬೆಲೆ ಜಾಸ್ತಿಯಾಗಿರುವ ಬಗ್ಗೆ ಏತಕ್ಕಾಗಿ ಎಫೆಕ್ಟ್ ಕೊಟ್ಟಿದ್ದೀರಿ? ನಮ್ಮನ್ನು ಕರೆದು ಈ ವಿಷಯದ ಬಗ್ಗೆ ಚರ್ಚೆ ಮಾಡಬಹುದಾಗಿತ್ತಲ್ಲವೇ? ನಮ್ಮನ್ನೆಲ್ಲಾ ತಾವು ಕರೆದು ಈ ರೀತಿಯಾಗಿದೆಯಲ್ಲಾ ಏನು ಮಾಡುವುದು ಎಂದು ಕೇಳಬಹುದಾಗಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಸಿಂಧ್ಯಾರವರೆ, ಅದನ್ನೇ ತಾವು ತಪ್ಪು ತಿಳಿದುಕೊಂಡಿದ್ದೀರಿ. ಕೇಂದ್ರ ಸರ್ಕಾರವು ಬೆಲೆಯನ್ನು 29ನೇ ತಾರೀಖಿನಿಂದ ಏರಿಸಿ 1ನೇ ಏಪ್ರಿಲ್‌ನಿಂದ ಜಾರಿಗೆ ಕೊಡಬೇಕೆಂದು ಆದೇಶವಿತ್ತು; ಅದಕ್ಕಾಗಿ ಮಾಡಿದ್ದೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಕೇಂದ್ರ ಸರ್ಕಾರವು ಇದನ್ನು ಜಾರಿಗೆ ತರಬೇಕೆಂದು ಹೇಳಿರುವ ರೆಕಾರ್ಡ್ಸ್‌ನ್ನು ತೋರಿಸಿ. ನಮ್ಮ ಸಬ್ಸಿಡಿಯನ್ನು ವಾಪಸ್ಸು ತೆಗೆದುಕೊಂಡಿದ್ದೇವೆಂದು ಅವರು ಹೇಳುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಸಿಂಧ್ಯಾರವರೆ, ತಾವು ಈ ಪ್ರಶ್ನೆಯನ್ನು ಕೇಳುತ್ತೀರೆಂದು ಕೇಂದ್ರ ಸರ್ಕಾರದಿಂದ ಬಂದಿರುವ ಪತ್ರವನ್ನು ತರಿಸಿ ಎಂದು ನಾನು ಹೇಳಿದ್ದೇನೆ. ಅದನ್ನು ನಿಮಗೆ ಕೊಡುತ್ತೇನೆ. ಇದರಲ್ಲಿ ಮಚ್ಚುಮರೆ ಏನಿದೆ? ನೀವು ಬಡವರ ಪರವಾಗಿ ಮಾತನಾಡುತ್ತೀರಿ, ನಾವು ಕೂಡ ಬಡವರ ಪರವಾಗಿ ಮಾತನಾಡುತ್ತೇವೆ. ಇಲ್ಲಿ ನಿಮ್ಮ ಧ್ವನಿ ಸ್ವಲ್ಪ ದೊಡ್ಡದಾಗಿದೆ, ನಿಮಗೆ ಜವಾಬ್ದಾರಿ ಜಾಸ್ತಿ ಇದೆ, ಹೊರೆಯು ಕಡಿಮೆ ಇದೆ. ತಾವು ಆಡಳಿತದಲ್ಲಿದ್ದಾಗ ಹೊರೆ ಜಾಸ್ತಿ ಇತ್ತು. ಆದ್ದರಿಂದ ಗಂಭೀರವಾಗಿದ್ದೀರಿ. ರಸ್ತೆ ಪ್ರಯಾಣ ದರವನ್ನು ಕಡಿಮೆ ಮಾಡುತ್ತೇವೆಂದು ತಾವು ಹಿಂದೆ ಹೇಳಿದ್ದೀರಿ, ಆದರೆ ಬೆಲೆಯನ್ನು ಜಾಸ್ತಿ ಮಾಡಿದಿರಿ, ಶೇಕಡ 35 ರಷ್ಟು ಡೀಸೆಲ್ ಬೆಲೆಯನ್ನು ಜಾಸ್ತಿ ಮಾಡಿದಾಗ ನೀವು ಕೂಡ ಸಾರಿಗೆ ಮಂತ್ರಿಗಳಾಗಿ ಏನು ಮಾಡುತ್ತಿದ್ದೀರಿ?

ಶ್ರೀ ಪಿ. ಜಿ. ಆರ್. ಸಿಂಧ್ಯ : ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನ ಡಿಮ್ಯಾಂಡ್ಸ್ ಬಂದಂತಹ ಸಂದರ್ಭದಲ್ಲಿ ನಿಮ್ಮ ವೈಟ್ ಪೇಪರ್‌ನಲ್ಲಿ, ನಿಮ್ಮ ಸರ್ಕಾರವು ಹೇಳಿರತಕ್ಕಂಥದನ್ನು ತೆಗೆದುನೋಡಿ ಬೆಲೆಗಳನ್ನು 24 ಪರ್ಸೆಂಟ್ ಜಾಸ್ತಿ ಮಾಡಿ ರಿಯಲೈಜ್ ಮಾಡಿರುವುದು 13 ಪರ್ಸೆಂಟ್.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಪ್ರಿನ್ಸಿಪಲ್ಸ್‌ನ್ನು ಹೇಳುತ್ತಿದ್ದೇನೆ, ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿ ಸಿಕ್ಕಿರತಕ್ಕಂತಹ ಈ ಜೀವನಾವಶ್ಯಕ ವಸ್ತುಗಳಿಗೆ ಸಬ್ಸಿಡಿ, ಅದು ಗೊಬ್ಬರ, ಡೀಸೆಲ್ ಮತ್ತು ಪೆಟ್ರೋಲ್ ಮತ್ತು ಜೀವನಾವಶ್ಯಕ ವಸ್ತುಗಳು ಇರಬಹುದು. ನಾವು ರಾಜ್ಯ ಸರ್ಕಾರಕ್ಕೆ ಸೀಮಿತವಾಗಿರತಕ್ಕಂತಹ ಪರಿಸರದಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದರೆ ಕೇಂದ್ರ ಸರ್ಕಾರವು ವಿಶಾಲವಾಗಿ ತೆಗೆದು ಕೊಳ್ಳತಕ್ಕಂತಹ ನಿರ್ಧಾರಗಳಿಗೆ ನಾವು ಬದ್ಧರಾಗಿರಬೇಕಾಗುತ್ತದೆ. ತಾವು ನಿನ್ನೆಯೂ ಕೂಡ ಹೇಳಿದ್ದೀರಿ, ಎನ್‌ಡಿಎ ಸರ್ಕಾರ ಫ್ಲೋರ್ ರೇಟ್ ಸೇಲ್ಸ್‌ಟ್ಯಾಕ್ಸ್‌ಗೆ ಹಾಕಬೇಕೆಂದು ಹೇಳಿ, ನೀವು ಏತಕ್ಕಾಗಿ ದಿಢೀರನೆ ಒಪ್ಪಿಕೊಂಡಿದ್ದೀರಿ. ಕೇಂದ್ರ ಸರ್ಕಾರದ ಜೊತೆ ಸಂಘರ್ಷ ಮಾಡಬೇಕೆಂದು ನಮಗೆ ಆಸಕ್ತಿ ಇಲ್ಲ; ಇಲ್ಲಿ ಒಪ್ಪಿಕೊಳ್ಳಬೇಕಾದಂತಹ ಪರಿಸ್ಥಿತಿ ಇದೆ; ಇಲ್ಲದಿದ್ದರೆ ನಮ್ಮ ಜೇಬಿನಿಂದ ಹಣವನ್ನು ಹಾಕಬೇಕಾಗುತ್ತದೆ. ಇದನ್ನು ನಾವು ನೇರವಾಗಿ ಕೊಟ್ಟಿದ್ದರೆ ಸರಿ- ಸುಮಾರು ರಾಜ್ಯ ಸರ್ಕಾರಕ್ಕೆ ಅಂದಾಜು 900 ಕೋಟಿ ರೂಪಾಯಿಗಳು ಹೆಚ್ಚು ಹೊರೆ ಬೀಳುತ್ತಿತ್ತು ಎಂಬ ಬಗ್ಗೆ ಮಾನ್ಯ ಸಿಂಧ್ಯಾರವರಿಗೂ ಗೊತ್ತಿದೆ. ಆದ್ದರಿಂದ ನಾವು ಎಷ್ಟು ದೂರಕ್ಕೆ ಹೋಗಬಹುದು ಎನ್ನುವುದರ

ಬಗ್ಗೆ ನಾವು ಆಲೋಚನೆಯನ್ನು ಮಾಡಿದ್ದೇವೆ. ನೀವು ಕೊಟ್ಟಿರುವಂತಹ ಸಲಹೆಗಳು ಏನಿದೆ, ಇದರಲ್ಲಿ ವಿಶೇಷವಾಗಿ ಈ ಇಲಾಖೆಗಳಿಗೆ ಸಂಬಂಧಪಟ್ಟಂತೆ ವಿವರಗಳು ಇನ್ನು ಬೇಕಾದರೆ ಮಾನ್ಯ ಸದಸ್ಯರು ಕೊಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಪಾಪಣ್ಣ (ಹುಣಸೂರು) : ಸನ್ಮಾನ್ಯ ಅಧ್ಯಕ್ಷರೆ, ಪಡಿತರ ಬೆಲೆ ಜಾಸ್ತಿಯಾಗಿದೆ, ಪಡಿತರದಾರನಿಗೆ ತೊಂದರೆಯಾಗಿದೆ ಎಂಬುದರ ಬಗ್ಗೆ ಸದನದಲ್ಲಿ ಚರ್ಚೆ ನಡೆಯುತ್ತಿದೆ. ಪಡಿತರ ಬೆಲೆಗಳು ಈಗ ಎಷ್ಟು ಜಾಸ್ತಿ ಮಾಡಿದ್ದಾರೆ, ಎಷ್ಟು ಪದಾರ್ಥಗಳಿಗೆ ಜಾಸ್ತಿಮಾಡಿದ್ದಾರೆ, ಇದರಿಂದ ಎಷ್ಟು ನಷ್ಟವಾಗಿದೆ ಎಂಬುದರ ಬಗ್ಗೆ ವರದಿಯನ್ನು ಕೊಡಿ; ಅನಂತರ ಈ ಬಗ್ಗೆ ಚರ್ಚೆ ಮಾಡಿದರೆ ಒಳ್ಳೆಯದು. ನನ್ನ ಮಾಹಿತಿಯ ಪ್ರಕಾರ ಪಡಿತರದಾರನಿಗೆ ನಷ್ಟವಾಗುತ್ತಿಲ್ಲ, ಕೇಂದ್ರ ಸರ್ಕಾರದ ನೀತಿಯಿಂದ ಫಾಯಿದೆ ಆಗುತ್ತಿದೆ ಎಂಬ ಬಗ್ಗೆ ಮಾಹಿತಿಯನ್ನು ನಾನು ಕೊಡುತ್ತೇನೆ. ಇದರ ಬಗ್ಗೆ ಮಾನ್ಯ ಆಹಾರ ಸಚಿವರು ಉತ್ತರವನ್ನು ಕೊಡಬೇಕೆಂದು ಮನವಿಯನ್ನು ಮಾಡುತ್ತೇನೆ. ಮೊದಲು ಪಡಿತರದಾರರಿಗೆ ಎಷ್ಟು ಕೆಜಿ ಅಕ್ಕಿಯನ್ನು ಕೊಡುತ್ತಿದ್ದರು?

ಶ್ರೀ ಡಿ. ಬಿ. ಚಂದ್ರೇಗೌಡ : ಮೊದಲೇ ನೋಟೀಸ್ ಕೊಡದೆ ಈ ರೀತಿಯಾಗಿ ಚರ್ಚೆ ಮಾಡಿದರೆ ಹೇಗೆ? ಎಲ್ಲಾ ವಿಷಯಕ್ಕೂ ಎದ್ದು ನಿಂತು ಪ್ರಶ್ನೆಯನ್ನು ಕೇಳುತ್ತಿರುವುದೇ? ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡುವುದೇನೆಂದರೆ ಯಾವುದಕ್ಕಾದರೂ ಒಂದು ಶಿಸ್ತು ಇರಬೇಕು.

(ಗೊಂದಲ)

ಶ್ರೀ ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಪಡಿತರದಾರನಿಗೆ ಕೇಂದ್ರ ಸರ್ಕಾರದಿಂದ ಅನ್ಯಾಯವಾಗುತ್ತಿದೆ, ದಯಮಾಡಿ ತಾವು ಮಾಹಿತಿಯನ್ನು ತರಿಸಿಕೊಂಡು ಚರ್ಚೆಗೆ ಅನುಮತಿಯನ್ನು ಕೊಟ್ಟು ಮುಂದಕ್ಕೆ ಹೋಗಬೇಕೆಂದು ತಮ್ಮಲ್ಲಿ ನಾನು ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಪಾಪಣ್ಣ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಹೊಸ ಸದಸ್ಯರುಗಳಿದ್ದಾರೆ, ಅವರುಗಳು ಸ್ವಲ್ಪ ನೀತಿನಿಯಮಗಳನ್ನು ತಿಳಿದುಕೊಳ್ಳದೆ ಇರಬಹುದು, ದಯವಿಟ್ಟು ಸಾವಧಾನವಾಗಿ ಮಂತ್ರಿಗಳು ಆಲಿಸಬೇಕಾಗುತ್ತದೆ. ಅದಕ್ಕೋಸ್ಕರವಾಗಿ ತಾವು ಸಿಟ್ಟು ಮಾಡಿಕೊಂಡರೆ ಹೇಗೆ?

ಶ್ರೀ ಡಿ. ಬಿ. ಚಂದ್ರೇಗೌಡ : ನಾವು ನಿಯಮಾವಳಿಗಳ ವ್ಯಾಪ್ತಿಯೊಳಗೆ ಕೆಲಸ ಮಾಡುವುದನ್ನು ಕಲಿಯದಿದ್ದರೆ ದಾರಿ ತಪ್ಪಿಹೋಗುತ್ತದೆ.

ಶ್ರೀ ವಿ. ಪಾಪಣ್ಣ : ನಾವು ಕಲಿಯುತ್ತಿದ್ದೇವೆ, ನಮಗೆ ತಾವು ಸಹಕಾರವನ್ನು ಕೊಡಬೇಕು.

(ಗೊಂದಲ)

+ಶ್ರೀ ಡಿ. ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : ಮಾನ್ಯ ಅಧ್ಯಕ್ಷರೆ; ಇಲ್ಲಿ ಒಂದು ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲಿನ ಸರ್ಕಾರವು ಸಬ್ಸಿಡಿಯನ್ನು ಕೊಡುತ್ತಿತ್ತು. ಈಗಿನ ಸರ್ಕಾರ ಸಬ್ಸಿಡಿಯನ್ನು ಕೊಡುವುದಿಲ್ಲ

ಎನ್ನುವ ಮಾತನ್ನು ಹೇಳಿದರು. ಇವತ್ತು, ಸಬ್ಸಿಡಿ ಇರತಕ್ಕಂತಹ ಪ್ರಮಾಣ ಜಾಸ್ತಿಯಾಗಿದೆ, ಮೊದಲಿನ ಕೇಂದ್ರ ಸರ್ಕಾರದ ಇಷ್ಯೂ ಪ್ರೈಸ್ ಒಂದು ಕಿಲೋ ಅಕ್ಕಿಗೆ 9.05 ಪೈಸೆ ಇತ್ತು, ಕೇಂದ್ರ ಸರ್ಕಾರದವರು 28.75 ಲಕ್ಷ ಕುಟುಂಬಗಳಿಗೆ ಸಬ್ಸಿಡಿಯನ್ನು ಕೊಡುತ್ತಿದ್ದರು. ರಾಜ್ಯ ಸರ್ಕಾರದವರು ಸುಮಾರು 65 ಲಕ್ಷ ಕುಟುಂಬಗಳು, ಇಬಿಪಿಎಲ್ ಕುಟುಂಬಗಳಿಗೆ ಮಿಕ್ಕಿದಂತಹ 28.75 ಲಕ್ಷಕ್ಕಿಂತಲೂ ಜಾಸ್ತಿ ಇರತಕ್ಕಂತಹ ಇವರಿಗೆ 9.05 ಪೈಸೆಗೆ ಖರೀದಿಯನ್ನು ಮಾಡಿ 3.50 ಪೈಸೆಗೆ ನಾವು ಇಷ್ಯೂ ಮಾಡುತ್ತಿದ್ದೇವೆ. ಹೋದವರ್ಷ ಸಬ್ಸಿಡಿ ಕಾಂಪೋನೆಂಟ್ 305 ಕೋಟಿ ರೂಪಾಯಿಗಳಷ್ಟು ಖರ್ಚಾಗಿತ್ತು. ಒಂದು ವೇಳೆ ರಾಜ್ಯ ಸರ್ಕಾರ ಈಗ ಕೇಂದ್ರ ಸರ್ಕಾರವು ಮಾಡಿದಂತಹ increase in prices had to be absorbed, then the subsidy component would have raisen to Rs.985 crores in a calender year. ಈಗ ಇಬಿಪಿಎಲ್‌ನ ಧಾರಣೆ ಮೊದಲು ರೂ. 9-05 ಪೈಸೆ ಇದ್ದಿದ್ದನ್ನು ಇವತ್ತು ಕೇಂದ್ರ ಸರ್ಕಾರವು 11.80 ಪೈಸೆಗೆ ಏರಿಸಿದ್ದಾರೆ. ಇಷ್ಯೂ ಪ್ರೈಸಸ್ ಅವರು ಇವತ್ತು 5.90 ಪೈಸೆಗೆ ಏರಿಸಿದ್ದಾರೆ. 12.70 ಪೈಸೆ for APL ಇವೆಲ್ಲವನ್ನು ನೋಡಿಕೊಂಡರೆ, ಇವತ್ತು ನಮ್ಮ ಸಬ್ಸಿಡಿ ಕಾಂಪೋನೆಂಟ್ ಆಗುವುದು ಈ ವರ್ಷಕ್ಕೆ 550 ಕೋಟಿ ರೂಪಾಯಿಗಳಾಗುತ್ತದೆ. ಇವತ್ತು ಬಜೆಟ್ ಪ್ರೆಸೆಂಟ್ ಆದನಂತರ 10 ಕೆಜಿ ಇದ್ದದ್ದನ್ನು 20 ಕೆಜಿ ಅಕ್ಕಿಯನ್ನು ಕೊಡತಕ್ಕಂಥ ಕಾಲದಲ್ಲಿ ನಾವು ಕೊಡುತ್ತಿರುವ ಸಬ್ಸಿಡಿ ಕಾಂಪೋನೆಂಟ್ ಎಷ್ಟನ್ನು ಅಬ್ಸರ್ವ್ ಮಾಡಿಕೊಳ್ಳಬೇಕೆನ್ನುವ ದೃಷ್ಟಿಯಿಂದ ವಿಚಾರಮಾಡಿಕೊಂಡು what is most feassible to the state Government ಎನ್ನುವಂತಹ ದೃಷ್ಟಿಯಿಂದ ನಾವು ಇವತ್ತು ಅಬ್ಸರ್ವ್ ಮಾಡಿಕೊಂಡಿದ್ದೇವೆ. 305 ಕೋಟಿ ರೂಪಾಯಿಗಳು ಇದ್ದದನ್ನು 550 ಕೋಟಿ ರೂಪಾಯಿಗಳನ್ನು ಮಾಡಿಕೊಂಡಿದ್ದೇವೆ. ಇವತ್ತು ತಾವು ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೀರಿ, ಇದನ್ನು ಏಪ್ರಿಲ್ ತಿಂಗಳಲ್ಲಿ ಏತಕ್ಕಾಗಿ ಮಾಡಬೇಕು? because these are the price increases from 1st April, ಈ ಒಂದು ಕಮ್ಯೂನಿಕೇಷನ್ ಬಂದ ನಂತರ ಉಗಾದಿ ಹಬ್ಬ ಬರುತ್ತಿದೆ ಎನ್ನುವುದು ಗುರುತಿಸಿದ ನಂತರ We took immediate decision to see that no poor person is not issued foodgrains. Therefore, from first April we took a decision to increase the prices keeping in view our state Government's budgetary contraints. ಇವತ್ತು ತಮಗೂ ಗೊತ್ತಿದೆ. On the first April we have issued clear instructions how green cards should be issued. ಮೊದಲಿನ ಕಾಲಕ್ಕೆ ಏನಾಗುತ್ತದೆಂದರೆ, ಹಸಿರು ಕಾರ್ಡ್‌ನ್ನು ಕೊಡತಕ್ಕಂಥ ಸಂದರ್ಭದಲ್ಲಿ ಪಾರ್ಟಿ ವರ್ಕರ್ಸ್‌ಗೆ ಹಸಿರುಕಾರ್ಡ್‌ನ್ನು ಕೊಡುವಂತಹ ವ್ಯವಸ್ಥೆ ಮಾಡುತ್ತಿದ್ದರು, ಆ ಪದ್ಧತಿ ಇರಬಾರದು. ಇವತ್ತು ಯಾವುದೇ ಒಬ್ಬ ವ್ಯಕ್ತಿ ಹಸಿರು ಕಾರ್ಡ್‌ನ್ನು ಪಡೆಯುವುದಕ್ಕೆ ಅರ್ಹತೆ ಇದ್ದಾಗ ಅವನಿಗೆ, it should be a continuous process ಎನ್ನುವ ದೃಷ್ಟಿಯಿಂದ ಹೊಸ ಆರ್ಡರನ್ನು ಇಷ್ಯೂ ಮಾಡಿದ್ದೇವೆ. ಇಷ್ಟಾದರೂ ಕೂಡ 65 ರಿಂದ 66 ಲಕ್ಷ ಕುಟುಂಬಗಳಿಗೆ ಬಡತನ ರೇಖೆಯಿಂದ ಕೆಳಗಿರುವವರಿಗೆ ಕಾರ್ಡುಗಳನ್ನು ತೆಗೆದುಕೊಂಡಿದ್ದರೂ ಕೂಡ ಇವತ್ತು ಅದರಲ್ಲಿ ಬೋಗಸ್ ಕಾರ್ಡುಗಳು ಬಹಳಷ್ಟು ಇದೆ ಎನ್ನುವಂತಹ ಕಲ್ಪನೆ ಪ್ರತಿಯೊಂದು ಸರ್ಕಾರಕ್ಕೆ ಇದೆ.

12.20 ಪಿ. ಎಂ

ಆ ಬೋಗಸ್ ಕಾರ್ಡ್ ಎಲಿಮನೇಟ್ ಮಾಡಬೇಕೆನ್ನುವ ದೃಷ್ಟಿಯಿಂದ ಇವತ್ತು ಕಂಪ್ಯೂಟರೈಸೇಷನ್‌ನ್ನು ನಾವು ತೆಗೆದುಕೊಂಡಿದ್ದೇವೆ. ಕಂಪ್ಯೂಟರೈಸೇಷನ್‌ನಲ್ಲಿ ಫೋಟೋ ನನ್ನದು ಹಾಕುವುದಿಲ್ಲ ಯಾರದು ಹಾಕುವುದಿಲ್ಲ. ಯಾವ ವ್ಯಕ್ತಿ ಹೆಸರಿನಲ್ಲಿ ಕಾರ್ಡ್ ಇರುತ್ತದೆ ಆ ವ್ಯಕ್ತಿಯ ಫೋಟೋ ಹಾಕುವಂತಹ ವಿಚಾರವನ್ನು ಮಾಡುತ್ತಿದ್ದೇವೆ. ಇದರಲ್ಲಿ ಕಂಪ್ಯೂಟರೈಸ್ಡ್ ಕಾರ್ಡ್ ಕೊಡುವುದರ ಜೊತೆಗೆ ಒಂದು ಬುಕ್‌ಲೆಟ್ ಕೊಡಬೇಕೆನ್ನುವ ವಿಚಾರ ಇಟ್ಟಿದ್ದೇವೆ. ಉದಾಹರಣೆಗೆ ಈಚ್ ಐಟಂ ಅಕ್ಕಿ ಕೊಡುವಾಗ ಒಂದು ಸ್ಟಿಕ್ಕರ್ ಕೊಡಬೇಕು, ಸಕ್ಕರೆಗೆ ಒಂದು ಸ್ಟಿಕ್ಕರ್ ಕೊಡಬೇಕು, ಗೋಧಿಗೆ ಒಂದು ಸ್ಟಿಕ್ಕರ್ ಕೊಡಬೇಕು, ಹೀಗೆ ಬೇರೆ ಬೇರೆ ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಿ ಹೋಲ್‌ಸೇಲ್ ಡಿಪೋನಲ್ಲಿ ಅದನ್ನು ಸ್ಕ್ರುಟಿನೈಸ್ ಮಾಡಬೇಕು ಅದೆಲ್ಲ ಕೂಡಿಕೊಂಡು ನಮಗೆ ತಿಳಿಯತಕ್ಕ ಒಂದು ವ್ಯವಸ್ಥೆಯನ್ನು We want to bring in. ಇದನ್ನೆಲ್ಲ ಮಾಡಿದರೆ ಬೋಗಸ್ ಇರತಕ್ಕ ಎಲ್ಲ ಜನರನ್ನು ಎಲಿಮನೇಟ್ ಮಾಡಿಕೊಂಡು ನಿಜವಾದಂತಹ ಬಡವರಿಗೆ ಹಸಿರುಕಾರ್ಡ್ ಕೊಡಬೇಕೆನ್ನುವಂತಹ ವಿಚಾರವಿದೆ. ಇವತ್ತು 111 ಲಕ್ಷ ಹಸಿರು ಕಾರ್ಡ್ ಹೋಲ್ಡರ್ಸ್ ಇದ್ದಾರೆ. ಕೆಲವು ಕಡೆ ನಾವು ವಿಚಾರ ಮಾಡಿದರೆ ಜನಸಂಖ್ಯೆಗಿಂತ ಜಾಸ್ತಿ ರೇಷನ್ ಕಾರ್ಡ್ ಕೊಡುವಂತಹ ಪರಿಸ್ಥಿತಿ ಉದ್ಭವವಾಗಿದೆ. ಆದರೂ ಸಹಿತ ನಮ್ಮ ಪ್ರವಾಸದಲ್ಲಿ ಏನು ಕಂಡುಬರುತ್ತಿದೆ ಅಂದರೆ ಇನ್ನು ಬಹಳಷ್ಟು ಬಡವರಿಗೆ ಕಾರ್ಡ್ ಕೊಟ್ಟಿಲ್ಲ. ಆ ಬಡವರಿಗೆ ಕಾರ್ಡ್ ಕೊಡಬೇಕೆನ್ನುವ ಕಳಕಳಿ ನಮ್ಮ ಸರ್ಕಾರಕ್ಕಿದೆ. ಕೊಡಬೇಕೆನ್ನುವ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ತಾವು ಉತ್ತಮವಾದಂತಹ ವಿಚಾರವನ್ನು ಎತ್ತಿದ್ದೀರಿ. ಯಾರೋ ಮಾಡಿದ್ದಕ್ಕೆ ನಾವು ಹೊಣೆಗಾರರಾಗುತ್ತಿದ್ದೇವೆ. ಅಕ್ಕಿ ಕೊಡಿಸತಕ್ಕ ಒಂದು ಪರಿಸ್ಥಿತಿ ಯು. ಆರ್. ಎಸ್. ರೈಸ್ ಅಂಡರ್ ರಿಲ್ಯಾಕ್ಸ್ ಸ್ಪೆಸಿಫಿಕೇಶನ್ ಅಕ್ಕಿಯನ್ನು ಕೊಟ್ಟಿದ್ದನ್ನು ನಾನು ಕೇಂದ್ರ ಸರ್ಕಾರದ ನೋಟೀಸ್‌ಗೆ ತಂದಿದ್ದು ಏನೆಂದರೆ it is not even fit for cattles ಎಂದು ಹೇಳಿದೆ. Today we have booked a case against the Food Corpn. of India saying this risc is not fit for human conumption. ಎಲ್ಲೆಲ್ಲಿ ಆ ಪರಿಸ್ಥಿತಿ ಉದ್ಭವವಾಗಿದೆ, ಎಲ್ಲಿ ಬಡ ಜನರು ಇದ್ದಾರೆ ಕೇಂದ್ರ ಸರ್ಕಾರಕ್ಕೆ ತಿಳಿಸತಕ್ಕ ಸಂದರ್ಭದಲ್ಲಿ ನಾವೇನು ತಿಳಿಸಿದ್ದೇವೆಂದರೆ ಬಡತನ ರೇಖೆ ಕೆಳಗೆ ಇರತಕ್ಕವರಿಗೆ ನಮ್ಮಲ್ಲಿ ಏನು ಅಲಾಟ್‌ಮೆಂಟ್ ಇದೆ ಅದನ್ನು ನೂರಕ್ಕೆ ನೂರರಷ್ಟು ಲಿಫ್ಟ್ ಮಾಡಿದ್ದೇವೆ. ಇದು ಏನು ತೋರಿಸಿಕೊಡುತ್ತದೆ ಅಂದರೆ ನಮ್ಮಲ್ಲಿರತಕ್ಕ ಬಡ ಜನರಿಗೆ ಈವೊಂದು ಆಹಾರಧಾನ್ಯದ ಅವಶ್ಯಕತೆ ಇದೆಯೆನ್ನುವುದನ್ನು ತೋರಿಸಿಕೊಡುತ್ತದೆ. ಆದರೆ ಕೊಡಬೇಕಾದರೆ, ಅವರು ಉಣ್ಣಲಿಕ್ಕೆ ಯೋಗ್ಯವಾಗಿರತಕ್ಕ ಆಹಾರ ಧಾನ್ಯವನ್ನು ಕೊಡಬೇಕು. ಕೆಟ್ಟದಾಗಿರತಕ್ಕ ಆಹಾರಧಾನ್ಯವನ್ನು ಕೊಡಬಾರದೆನ್ನುವ ದೃಷ್ಟಿಯಿಂದ We are talking every care to see that good quality food is supplied. We have made it clear to FCI that the food products supplied should be of good quality fit for human consumption. ಇವತ್ತು ತಾವು ಬಹಳ ಮಹತ್ವವಾದ ವಿಷಯವನ್ನು ಎತ್ತಿದ್ದೀರಿ. ಬಡಜನರ ಬಗ್ಗೆ ಕಳಕಳಿ ನಮ್ಮ ಸರ್ಕಾರಕ್ಕೂ ಕೂಡ ಬಹಳಷ್ಟು ಇದೆ. ಅವರು ಬಹಳ ಹಿಂದುಳಿದಿದ್ದಾರೆ. ಇವತ್ತು ಸಬ್ಸಿಡಿ

ಕಾಂಪೋನೆಂಟ್ಸ್ ಬಗ್ಗೆ ತಾವೇನು ಹೇಳುತ್ತಿದ್ದೀರಿ 305 ಕೋಟಿ ಇದ್ದುದನ್ನು ಈ ವರ್ಷ ನಾವು 55(ಕೋಟಿಯವರೆಗೂ ಖರ್ಚು ಮಾಡಬೇಕಾಗಿದೆ. ಅದನ್ನು ನಮ್ಮ ರಾಜ್ಯದ ಬಜೆಟ್‌ನ ಇತಿಮಿತಿಯನ್ನು ನೋಡಿಕೊಂಡು ಇಷ್ಟನ್ನು ಮಾಡಿದ್ದೇವೆ. ಇದಕ್ಕೆ ಎಲ್ಲರ ಸಹಕಾರ ಬೇಕಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಈಗ ಹಸಿರು ಕಾರ್ಡ್‌ಗಳನ್ನು ಅನರ್ಹರಿಗೆ ಕೊಟ್ಟಿರತಕ್ಕದ್ದನ್ನು ಎಲಿಮನೇಟ್ ಮಾಡಿ, ನಿಜವಾದ ಅರ್ಹ ಬಡವರಿಗೆ ಕೊಟ್ಟರ ನಾವು ಸಹಕಾರ ಕೊಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಈ ಸರ್ಕಾರದ ಧೋರಣೆಯನ್ನು ನಾವು ಎಲ್ಲಿ ಖಂಡಿಸುತ್ತೇವೆಂದರೆ, ಕೇಂದ್ರ ಸರ್ಕಾರದವರು ಮಾಡಿರತಕ್ಕದ್ದು ನಿಜ, ಏನಿದ ಅದನ್ನು ಮಾಡಬೇಕೆಂದು ನಾವು ಹೇಳಿದ್ದೇವೆ. ನಿಮ್ಮ ಸಬ್ಸಿಡಿ ಕಾಂಪೊನೆಂಟ್ ಏನಿದೆ 20 ಕೆ. ಜಿ. ಅದನ್ನು ಎಲ್ಲೂ ಕೊಟ್ಟಿಲ್ಲ. ಈ ತಿಂಗಳಿನಲ್ಲಿ ಕೊಟ್ಟಿರತಕ್ಕದ್ದು 10 ಕೆ. ಜಿ. ಇನ್ನು 20 ಕೆ. ಜಿ. ಕೊಟ್ಟಿಲ್ಲ ಸುಮ್ಮನೆ ಹೇಳುತ್ತಿದ್ದಾರೆ 20 ಕೆ. ಜಿ. ಕೊಡುತ್ತೇವೆಂದು. ಕೇಂದ್ರ ಸರ್ಕಾರದವರು ನಿಮಗೆ ಏಪ್ರಿಲ್ 1ನೇ ತಾರೀಖು ಕೊಡಬೇಕೆಂದು ಹೇಳಿಲ್ಲ. ನಮ್ಮ ಇಷ್ಟು ಪ್ರೈಸ್ ಇದು ಎಂದು ಹೇಳುತ್ತಾರೆ.

ಶ್ರೀ ಡಿ. ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೆ, ಈ ತಿಂಗಳು ಬರತಕ್ಕ ಖೋಟಾದಲ್ಲಿ 15 ಕೆ. ಜಿ. ಅಷ್ಟು ಅಲಾಟ್‌ಮೆಂಟ್ ಆಗಿದೆ. ಕೇಂದ್ರ ಸರ್ಕಾರಕ್ಕೆ ಖೋಟಾ ಜಾಸ್ತಿ ಮಾಡಿಯೆಂದು ಕೇಳಿದ್ದೇವೆ. ಅವರು ಮಾಡಬೇಕಾಗಿತ್ತು, ಮಾಡಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಅದು ನಿಮ್ಮ ಸರ್ಕಾರದ ಜವಾಬ್ದಾರಿ. ಬೇರೆಯವರನ್ನು ತೋರಿಸುವುದು, ದೆಹಲಿಯಲ್ಲಿರುವವರು ಜಾಸ್ತಿ ಮಾಡಿದ್ದಾರೆ ಅದಕ್ಕೋಸ್ಕರ ನಾವು ಜಾಸ್ತಿ ಮಾಡಿದ್ದೇವೆಂದು ಹೇಳಿ, ಬೀದಿಯಲ್ಲಿ ಹೋಗಿ ಧರಣಿ ಮಾಡುತ್ತೇವೆ. ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟಣೆ ಮಾಡುತ್ತೇವೆಂದು ಹೇಳಿ ಇವರ ಜವಾಬ್ದಾರಿಯಿಂದ ನುಸುಳಿಕೊಳ್ಳತಕ್ಕ ಕೆಲಸವನ್ನು ಮಾಡಿದ್ದಾರೆ. ನೀವು ಏಕೆ ಸಬ್ಸಿಡಿಯನ್ನು ಜಾಸ್ತಿ ಮಾಡಬಾರದು? ಜಾಸ್ತಿ ಸಬ್ಸಿಡಿ ಮಾಡುವುದಕ್ಕೆ ತೊಂದರೆಯೇನು? ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಿ? ನೀವು ಕಡಿಮೆ ಬೆಲೆಗೆ ಆಹಾರಧಾನ್ಯಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವಂತಹ, ನುಸುಳಿಕೊಳ್ಳುವಂತಹ ಮಾತನ್ನು ಮಾನ್ಯ ಸಿಂಧ್ಯಾರವರು ಪದೇ ಪದೇ ಹೇಳುತ್ತಾರೆ. ಮುಂದಿನ ಬೆಂಚಿನಲ್ಲಿ ಕುಳಿತುಕೊಂಡು ಅವರು ಜವಾಬ್ದಾರಿಯಿಂದ ಎಷ್ಟರಮಟ್ಟಿಗೆ ಕೆಲಸ ಮಾಡಿದರು ಈಗ ಅಲ್ಲಿಗೆ ಹೋದಮೇಲೆ ಅದು ಮರೆತು ಹೋಗಿಬಿಟ್ಟಿದ್ದಾರೆ. ಅದಕ್ಕೆ ನೀವು ಜವಾಬ್ದಾರಿಯಿಂದ ನುಸುಳಿಕೊಂಡಿದ್ದೀರಿ ಎಂದು ಹೇಳುತ್ತಾರೆ. ನುಸುಳಿಕೊಂಡಿದ್ದರೆ ನಾವು ಅಲ್ಲಿ ಕೂಡಬೇಕಾಗಿತ್ತು. ಜವಾಬ್ದಾರಿಯನ್ನು ಹೊತ್ತುಕೊಂಡಿರುವುದರಿಂದ ನಾವು ಇಲ್ಲಿ ಕುಳಿತಿದ್ದೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಚಂದ್ರೇಗೌಡರೇ ನನಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ ವೈಟ್‌ಪೇಪರ್ ಪೇಜ್ ನಂಬರ್ 35 ರಲ್ಲಿ. ನಾನು ಹೇಗೆ ಕೆಲಸ ಮಾಡಿದ್ದೇನೆಂಬುದು ಈ ವೈಟ್‌ಪೇಪರ್‌ನಲ್ಲಿದೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈಗ ನನಗೆ

ಆದೆಲ್ಲ ಬೇಡ. ನೀವು ರಾಜ್ಯ ಸರ್ಕಾರದಿಂದ 550 ಕೋಟಿ ರೂಪಾಯಿಗಳ ಸಬ್ಸಿಡಿ ಕೊಡುತ್ತೇವೆಂದು ಏನು ಹೇಳುತ್ತಿದ್ದೀರಿ ಅದು ಆಗುವುದಿಲ್ಲ. ನೀವು ಕೊಡುತ್ತಿರುವ ಅಂಕಿಅಂಶ ಏನಿದೆ ಅದು ಅಧಿಕಾರಿಗಳು ಸಂಗ್ರಹ ಮಾಡಿಕೊಟ್ಟಿರತಕ್ಕ ಅಂಕಿಅಂಶ. ಅದು ಸತ್ಯಕ್ಕೆ ದೂರವಾಗಿರತಕ್ಕದ್ದು. ನಿಮ್ಮ ನೀತಿ ಬಡವರ ವಿರೋಧಿ ನೀತಿ. ಎರಡೂ ಕಾಲು ಕೋಟಿ ಬಡ ಜನರಿಗೆ ಅನ್ಯಾಯ ಮಾಡುತ್ತಿದ್ದೀರಿ. ಇದನ್ನು ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಇವತ್ತು ಯುಗಾದಿ ಹಬ್ಬವನ್ನು ಯಾರೂ ಮಾಡಿಲ್ಲ. ನಿಮ್ಮ ಸರ್ಕಾರಕ್ಕೆ ಶಾಪ ಹಾಕಿದ್ದಾರೆ. ಏನಪ್ಪಾ ಈ ಸರ್ಕಾರ ಬಂದು ಈ ಗತಿ ಆಯಿತು ಎಂದು.

ಶ್ರೀ ಡಿ. ಬಿ. ಇನಾಂದಾರ್ : ಕೇಂದ್ರ ಸರ್ಕಾರ ಮಾಡಿದ್ದಕ್ಕೆ ನಮಗೆ ಏಕೆ ಶಾಪ?

ಶ್ರೀ ಪಿ. ಜಿ. ಆರ್. ಸಿಂಧ್ಯ : ನಾನು ಇವತ್ತು ಸರ್ಕಾರದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಸಬ್ಸಿಡಿ ಹಣವನ್ನು ಜಾಸ್ತಿ ಮಾಡಿ. ಬಡವರಿಗೆ ಇನ್ಯಾವ ರೀತಿಯಲ್ಲಿ ಸಹಾಯ ಮಾಡುವುದಕ್ಕೆ ಆಗುತ್ತದೆ? ಸಾಲ ತೆಗೆದುಕೊಂಡು ಬಂದು ಸಂಬಳ ಕೊಡುತ್ತಿದ್ದೀರಿ. ಬಡವರಿಗೇನು ನೀವು ಸಹಾಯ ಮಾಡತಕ್ಕದ್ದು? ಸಬ್ಸಿಡಿ ಅಮೌಂಟನ್ನು ನೀವು ಜಾಸ್ತಿ ಮಾಡಿ. 750 ಕೋಟಿ ರೂಪಾಯಿಗಳ ಸಬ್ಸಿಡಿ ಮಾಡಿ. ಅದನ್ನು ಮಾಡುವುದಕ್ಕೆ ತೊಂದರೆಯೇನು? ಎಲಿಮನೇಟ್ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. 27 ಲಕ್ಷ ಜನ ಮಾತ್ರ ಗುರುತು ಮಾಡಿರುವುದು ಎಂದು ಹೇಳುತ್ತೀರಿ ಕೇಂದ್ರ ಸರ್ಕಾರಕ್ಕೆ 27 ಲಕ್ಷ ಅಲ್ಲ 50 ಲಕ್ಷ ಅಂತ ಹೇಳಿ. ನಾವು ನಿಮ್ಮ ಜೊತೆಯಲ್ಲಿ ಬರುತ್ತೇವೆ.

ಶ್ರೀ ಡಿ. ಬಿ. ಚಂದ್ರೇಗೌಡ : ನಾವು ತಿಳಿದುಕೊಂಡಿರುವ ಹಾಗೆ ಕೇಂದ್ರ ಸರ್ಕಾರ ಬಹುತೇಕ ಆ ಕಡೆ ಕುಳಿತಿರುವವರದ್ದು. ನೀವು ಇದನ್ನು ಹೇಳಬಹುದಲ್ಲ. ನೀವು ಹೇಳಿ, ನಿಮ್ಮ ಜತೆಯಲ್ಲಿ ನಾವು ಬರುತ್ತೇವೆ.

ಶ್ರೀ ಡಿ. ಬಿ. ಇನಾಂದಾರ್ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಏನಾಗಿದೆ ಅಂದರೆ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕದ್ದು ಗ್ರಾಮಸಭೆಯಲ್ಲಿ ಎಂದು ಕೇಂದ್ರ ಸರ್ಕಾರದವರು ಗೈಡ್‌ಲೈನ್ಸ್ ಕೊಟ್ಟಿದ್ದರು. ಆ ಪ್ರಕಾರ ಫಲಾನುಭವಿಗಳನ್ನು ನಾವು ಸೆಲೆಕ್ಷನ್ ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ 28.75 ಲಕ್ಷ ಅಲ್ಲ 65 ಲಕ್ಷ ಕುಟುಂಬಗಳು ಕೂಡ ಬಡತನ ರೇಖೆಯ ಕೆಳಗಡೆ ಇವೆಯೆಂದು ತಿಳಿದುಕೊಳ್ಳಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಇದನ್ನು ನೀವು ಒಪ್ಪಬೇಕು. ನೀವು ಕೊಟ್ಟಿರತಕ್ಕ ಗೈಡ್‌ಲೈನ್ಸ್ ಪ್ರಕಾರ ಫಲಾನುಭವಿಗಳನ್ನು ಸೆಲೆಕ್ಷನ್ ಮಾಡಿದ್ದೇವೆ. For BPL families the rice supplied is not fit for human consumption. We have represented to to the Government of India. ನಾವು ಸ್ವತಃ ಹೋಗಿ ಕೇಂದ್ರಮಂತ್ರಿಗಳಿಗೆ ಭೇಟಿಯಾಗಿ ಒಂದು ಮನವಿಯನ್ನು ಕೂಡ ಕೊಟ್ಟು ಬಂದಿದ್ದೇವೆ. 66 ಲಕ್ಷ ಕುಟುಂಬಗಳೆಲ್ಲವೂ ಬಡತನ ರೇಖೆ ಕೆಳಗೆ ಬರುತ್ತವೆಂದು ತಾವು ಅಕ್ಸೆಪ್ಟ್ ಮಾಡಿ, ಈ ರಾಜ್ಯದ ಮೇಲೆ ಜಾಸ್ತಿ ಭಾರ ಹಾಕುವಂತಹ ಕಾರ್ಯವನ್ನು ಮಾಡಬೇಡಿರಿ ಎಂದು ಹೇಳಿ ರೆಪ್ರಸೆಂಟೇಷನ್ ಈಗಾಗಲೇ ಕೊಟ್ಟಿದ್ದೇವೆ. ಇದು

ಅಲ್ಲದೆ ನಮ್ಮ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳಿಗೆ ಪತ್ರವನ್ನು ಬರೆದಿದ್ದಾರೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಈ ವಿಷಯವನ್ನು ತೆಗೆದುಕೊಳ್ಳಬೇಕು, ಏಕೆಂದರೆ ಇವತ್ತು ಪ್ರತಿಯೊಂದು ರಾಜ್ಯದ ಮೇಲೆ ಭಾರ ಆಗುತ್ತಿದೆ. ಈ ಸಬ್ಸಿಡಿ ಕಾಂಪೋನೆಂಟನ್ನು ಪೂರ್ತಿಯಾಗಿ ಕೇಂದ್ರ ಸರ್ಕಾರದವರು ವಹಿಸಿಕೊಳ್ಳಬೇಕೆಂದು ಈಗಾಗಲೇ ಅದರ ಬಗ್ಗೆ ಕಾಗದವನ್ನು ಬರೆದಿದ್ದೇವೆ. ಮತ್ತೆ ಒತ್ತಾಯ ಮಾಡುತ್ತೇವೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಮತ್ತು ಕರ್ನಾಟಕದ ಜನತೆಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದವರಿಗೆ ಕೇಳುತ್ತೇನೆ, ಬಹುಶಃ ಕೇಂದ್ರ ಸರ್ಕಾರದವರು ಅಕ್ಕಿ ಧಾರಣೆಯನ್ನೇನು ಏರಿಸಿದ್ದಾರಲ್ಲಾ ಅದನ್ನು ಕರ್ನಾಟಕಕ್ಕೆ ಅಷ್ಟೆ ಏರಿಸಿದ್ದಾರೋ ಇಡೀ ರಾಷ್ಟ್ರಕ್ಕೆ ಏರಿಸಿದ್ದಾರೋ? ಅದೇ ಕೇರಳದಲ್ಲಿ ಏರಿಸಿದ್ದಾರೆ. ಕೇರಳದಲ್ಲಿ ಕೂಡ ಇದೇ ಧಾರಣೆಗೆ ಅಕ್ಕಿಯನ್ನು ಕೊಡುತ್ತಾರೆ. ಅವರು ಏಕೆ ಇದ್ದ ಧಾರಣೆಯಲ್ಲಿ ಮಾರಲಿಕ್ಕೆ ಹತ್ತಿದ್ದಾರೆ. ಕೇರಳದ ವಿವರ ತರಿಸಿಕೊಂಡಿದ್ದೀರಾ? ಕೇರಳದಲ್ಲಿ ಧಾರಣೆಯನ್ನು ಏರಿಸಿಲ್ಲ, ವಿವರ ತರಿಸಿಕೊಳ್ಳಿ. ಆಂಧ್ರದಲ್ಲಿ ಏರಿಸಿಲ್ಲ ಬೇಕಾದರೆ ವಿವರ ತರಿಸಿಕೊಳ್ಳಿ. ಇವರು ಬಡವರಿಗೆ ವಿರೋಧ ಇದ್ದಾರೆ. ಸುಮ್ಮನೆ ಇಲ್ಲಿ ಏನೋ ಒಂದು ನೆವ ಹೇಳುತ್ತಾರೆ. ಬಜೆಟ್‌ನಲ್ಲಿ ದುಡ್ಡು ಕೊಟ್ಟಿದ್ದೇವೆಂದರೆ, ಬಜೆಟ್‌ನ್ನು ನಾವು ನೋಡಿದ್ದೇವೆ. ಯಾರಿಗೆ ಕೊಡಬೇಕೋ ಅವರಿಗೆ ದುಡ್ಡು ಕೊಟ್ಟಿಲ್ಲ. ಕೊಡಲಿಕ್ಕೆ ಸಾಧ್ಯವೇ ಇವತ್ತು?

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್. ಎಸ್. ಪಾಟೀಲರ ಹತ್ತಿರ ಇರುವ ಮಾಹಿತಿ ನನ್ನ ಹತ್ತಿರ ಇಲ್ಲ. ಅವರು ಈಗ ಹೇಳಿದ್ದಾರೆ. ಪಕ್ಕದ ರಾಜ್ಯಗಳು ಬೆಲೆಯನ್ನು ಇನ್ನು ಏರಿಸಿಲ್ಲವೆಂದು ಹೇಳಿದ್ದಾರೆ. ಮಾಹಿತಿಯನ್ನು ತರಿಸಿಕೊಂಡು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಒಂದು ಮಾತನ್ನು ಅವರು ಹೇಳಬೇಕು. ಒಂದು ವೇಳೆ ಕೇರಳದಲ್ಲಿ ಬೆಲೆಯನ್ನು ಏರಿಸದಿದ್ದರೆ ಇವರು ಏರಿಸುವುದಿಲ್ಲವೋ ಹೇಗೆ? ಇವರು ನಮಗೆ ಈ ಉತ್ತರವನ್ನು ಕೊಡಬೇಕಾಗುತ್ತದೆ. ಕೇರಳದಲ್ಲಿ ಒಂದು ವೇಳೆ ಈಗ ಇದ್ದ ಧಾರಣೆಗೆ ಮಾರುತ್ತಿದ್ದರೆ ನೀವು ಕೂಡ ಅದೇ ರೀತಿ ಮಾಡುತ್ತೀರಾ?

ಅಧ್ಯಕ್ಷರು : ಕೇರಳದವರು ಹಾಗೆ ಮಾಡಿದರೆ ಹೀಗೆ ಮಾಡುತ್ತೀರಾ ಎನ್ನುವುದು ಎಂತಹ ಪ್ರಶ್ನೆ ಇದು? ಅದು ಆಯಾಯ ಸರ್ಕಾರಕ್ಕೆ ಸಂಬಂಧಪಟ್ಟಿದ್ದು.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಅದನ್ನೆ ವಿತ್ತಂಡ ವಾದ ಎಂದು ಹೇಳುವುದು. ಅದು ವಾದ ಅಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಭೈರೇಗೌಡರೇ, ನೀವೇ ಕೊನೆಯ ಭಾಷಣಕಾರರು. ಒಂದು ನಿಮಿಷ ಮಾತನಾಡಿ ಸಾಕು.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಮಾತು. ಇವರಿಗೆ ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ. ಕೇಂದ್ರ ಸರ್ಕಾರ ಉಳಿದಿರಬೇಕು, ರಾಜ್ಯ ಸರ್ಕಾರದ ಮೇಲೆ ದೂರು ಹಾಕಬೇಕು. ಈ ಕೆಲಸ ಮಾಡುವುದಕ್ಕೆ ಆಗುವುದಿಲ್ಲ

ಶ್ರೀ ಪಿ. ಜಿ. ಆರ್. ಸಿಂಧ್ಯ : ನಮ್ಮ ಸರ್ಕಾರ ಇದ್ದಾಗ ಇಡೀ ದೇಶದಲ್ಲೇ ಎನ್. ಟಿ. ಆರ್. ಒಬ್ಬರನ್ನು ಬಿಟ್ಟರೆ ಅಕ್ಕಿಯನ್ನು ಕಡಿಮೆ ಬೆಲೆಯಲ್ಲಿ ಮಾರಿರತಕ್ಕಂಥ ಕೀರ್ತಿ ನಮಗೆ ಸೇರತಕ್ಕದ್ದು. ಮತ್ತೆ ನಾವು ಅಧಿಕಾರಕ್ಕೆ ಬರುತ್ತೇವೆ ಎಂದು ನಿನ್ನೆ ನಾನು ಹೇಳಿದ್ದೇನೆ. ಅಕ್ಕಿ ಬೆಲೆಯನ್ನು ಮತ್ತೆ ಕಡಿಮೆ ಮಾಡುತ್ತೇವೆ. ಆದರೆ ಈ ಸರ್ಕಾರದ ಧೋರಣೆಯನ್ನು ನಾವು ಖಂಡಿಸುತ್ತಿದ್ದೇವೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ ಕೇಂದ್ರ ಸರ್ಕಾರ ಆಹಾರಪದಾರ್ಥಗಳ ಬೆಲೆಯನ್ನು.....

(ಗೊಂದಲ)

ಅಧ್ಯಕ್ಷರು : ನಿಮ್ಮ ಪಕ್ಷದವರೇ ಮಾತನಾಡುವಾಗ, ನೀವು ಏಕೆ ಅಡ್ಡಿಮಾಡುತ್ತೀರಿ?

ಶ್ರೀ ಸಿ. ಭೈರೇಗೌಡ : ಈ ರೀತಿಯಾಗಿ ನ್ಯಾಯಬೆಲೆ ಅಂಗಡಿಗಳಲ್ಲಿ ಕೊಡುತ್ತಿರತಕ್ಕಂಥ ಪಧಾರ್ಥಗಳ ಬೆಲೆ ಏರಿಸತಕ್ಕದ್ದು ಇದೇ ಮೊದಲು ಅಲ್ಲ. ಇದು ಯಾವತ್ತೂ ಕೂಡ ಟೋಟಲ್ ಮನಾಪಲಿ ಬೆಲೆಯೇರಿಸತಕ್ಕದ್ದು - it is the total monopoly of the Congress Government. ಏಕೆಂದರೆ ಹಿಂದೆ ನಮ್ಮ ಸರ್ಕಾರ ಬಂದಾಗ ನೀವು ನಮಗಿಂತಲೂ ಮೊದಲು ಇದ್ದಿರಲ್ಲ, ನೀವು ವಿರೋಧಪಕ್ಷದ ನಾಯಕರಾಗಿ ಇದ್ದಿರಲ್ಲ, ಆವಾಗ ನೀವು ಏನೇನು ಇದರ ಬಗ್ಗೆ ಮಾತನಾಡಿದ್ದೀರಿ ಎನ್ನತಕ್ಕದ್ದು ನಮಗೆ ಗೊತ್ತಿದೆ. ಆವಾಗ ಐದು ರೂಪಾಯಿ ಎಂಬತ್ತು ಪೈಸೆ ಇತ್ತು. ಕಾಂಗ್ರೆಸ್ ಸರ್ಕಾರ ಇದ್ದಕಾಲದಲ್ಲಿ, ಮಾನ್ಯ ನರಸಿಂರಾಯರ ಸರ್ಕಾರ ಇದ್ದ ಕಾಲದಲ್ಲಿ ಇದು ಐದು ರೂಪಾಯಿ ಎಂಬತ್ತು ಪೈಸೆಗೆ ಹೋಗಿತ್ತು. ನಾವು ಬಂದಮೇಲೆ ಅದನ್ನು ಮೂರು ರೂಪಾಯಿ ಮೂವತ್ತು ಪೈಸೆಗೆ ಇಳಿಸಿದ್ದೇವೆ. ಇದು ಕಡತದಲ್ಲಿ ಇದೆ. ಆವಾಗಲೂ ಕೂಡ ಬೆಲೆ ಏರಿಸಿರತಕ್ಕಂಥ ಕೀರ್ತಿ ಕಾಂಗ್ರೆಸ್ಸಿನದ್ದು. ಇವತ್ತು ಕೇಂದ್ರದಲ್ಲಿ ನೀವು ಇಲ್ಲವೆಂದು ತಿಳಿದುಕೊಂಡು ಅದಕ್ಕೆ ಅವಕಾಶ ಸಿಕ್ಕಿದ ತಕ್ಷಣ ಇಲ್ಲಿ ಬೆಲೆ ಏರಿಸತಕ್ಕಂಥ ಪ್ರಯತ್ನ ಮಾಡಿದ್ದೀರಿ. ನಾವು ಆವತ್ತಿನ ದಿವಸ ಬೆಲೆ ವ್ಯತ್ಯಾಸವನ್ನು ರಾಜ್ಯ ಸರ್ಕಾರದಿಂದ ಭರಿಸತಕ್ಕಂಥ ಕೆಲಸ ಮಾಡಿದ್ದೇವೆ. ಆ ಕೆಲಸವನ್ನು ನೀವು ಕೂಡ ಮಾಡಬಹುದು. ಏಕೆ ಅದನ್ನು ಮಾಡುವುದಕ್ಕೆ ನಿಮಗೆ ಆಗುತ್ತಿಲ್ಲ?

ಶ್ರೀ ಡಿ. ಬಿ. ಚಂದ್ರೇಗೌಡ : ಈಗಲೂ ಮಾಡುತ್ತಿದ್ದೇವೆ. 550 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಸಬ್ಸಿಡಿ ಕೊಡುತ್ತಿದೆ.

(ಗೊಂದಲ)

ಶ್ರೀ ಸಿ. ಭೈರೇಗೌಡ : ಹೆಚ್ಚುವರಿ ಮಾಡಿರತಕ್ಕದ್ದನ್ನು ಯಾವ ರೀತಿ ನಮ್ಮ ಸರ್ಕಾರ ಇದ್ದಾಗ ಭರಿಸಿದ್ದೆವೋ, ಆ ಕೆಲಸವನ್ನು ಇವರು ಮಾಡುವುದಕ್ಕೆ ತಯಾರಿಲ್ಲ. ಇದು ಇವರು ಬಡವರ ವಿರೋಧಿ ಎನ್ನತಕ್ಕದ್ದನ್ನು ತೋರಿಸುತ್ತದೆ. ಇದು ಇವರು ಬಡವರ ಹೊಟ್ಟೆಮೇಲೆ ಹೊಡೆಯತಕ್ಕಂಥ ಕೆಲಸ ಮಾಡತಕ್ಕಂಥಾದ್ದು. ಕಾಂಗ್ರೆಸ್ ಸರ್ಕಾರದ ಮನಾಪಲಿಯ ಅದೇ ಕೆಲಸವನ್ನು ಇವತ್ತು ಮಾಡಿದ್ದಾರೆ. ಇವತ್ತು ನಮ್ಮ ಸ್ನೇಹಿತರು ಒಂದು ಮಾತನ್ನು ಹೇಳಿದ್ದಾರೆ. ಪಕ್ಕದ ರಾಜ್ಯಗಳಲ್ಲಿ ಇವತ್ತು ಮೊದಲಿನ ಬೆಲೆಗೇ ಮಾರಾಟ ಮಾಡುತ್ತಿದ್ದಾರೆ. ನೀವು ಕೂಡ ಹಾಗೆ ಮಾರಾಟ ಮಾಡುವುದಕ್ಕೆ ಸಿದ್ಧರಿದ್ದೀರಾ ಎಂದು ಅವರು ಕೇಳಿದ್ದಕ್ಕೆ 'ಮಾಹಿತಿ ಇಲ್ಲ' ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ನೀವು ಪುನಃ ರಿಪೀಟ್ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಮಾತನಾಡುವುದು ಇವರದ್ದೇ ಮನಾಪಲೀನಾ?

ಶ್ರೀ ಸಿ. ಭೈರೇಗೌಡ : ನೀವು ಮಾಹಿತಿಯನ್ನು ತರಿಸಿ. ಮಾಹಿತಿಯ ಪ್ರಕಾರ.....

(ಗೊಂದಲ)

ಅಧ್ಯಕ್ಷರು : ಮಾಹಿತಿ ತರಿಸಿಕೊಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಸಿ. ಭೈರೇಗೌಡ : ಮಾಹಿತಿಯನ್ನು ತರಿಸಿ ಒಂದು ವೇಳೆ ಕಡಿಮೆ ಇದ್ದರೆ ಇವರು ಒಪ್ಪುತ್ತಾರಾ? ಅದಕ್ಕೆ ಇವರು ಉತ್ತರ ಕೊಟ್ಟಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ಕೇಂದ್ರ ಸರ್ಕಾರವನ್ನು ಹೊರತುಪಡಿಸಿ ಕೇಂದ್ರ ಸರ್ಕಾರ ಗುರುತಿಸಿರತಕ್ಕಂಥ 28 ಲಕ್ಷ ಕುಟುಂಬಗಳನ್ನು ಹೊರತುಪಡಿಸಿ ರಾಜ್ಯ ಸರ್ಕಾರವೇ ನೇರವಾಗಿ 37 ಲಕ್ಷ ಕುಟುಂಬಗಳಿಗೆ ಸಬ್ಸಿಡಿ ರೂಪದಲ್ಲಿ ಇದನ್ನೆಲ್ಲ ಮಾಡುತ್ತಿದೆ.

ಶ್ರೀ ವಿಶ್ವೇಶ್ವರ ಹೆಗಡೆ : ಇದು ಹೊಸ ವಿಷಯ ಏನೂ ಅಲ್ಲ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ : ಇವರು ಬಡವರ ವಿರೋಧಿ ಇದ್ದಾರೆ. ಪಡಿತರ ಬೆಲೆಗಳನ್ನು ಕಡಿಮೆ ಮಾಡುವುದಕ್ಕೆ ತಯಾರಿಲ್ಲ. ಇದನ್ನು ವಿರೋಧಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

(ಜೆ. ಡಿ. (ಯು) ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಡಿ. ಬಿ. ಚಂದ್ರೇಗೌಡ : ಇದಕ್ಕೇ ನಾನು 'ವಿತ್ತಂಡ ವಾದ' ಎಂದು ಹೇಳಿದ್ದು.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ನಮಗೆ ಇವತ್ತು ಬಹಳ ಸಂತೋಷವಾಗಿದೆ. ಮಾನ್ಯ ಸದಸ್ಯರುಗಳು ಬೆಲೆಯೇರಿಕೆ ವಿರುದ್ಧ ಸದನದಿಂದ ಹೊರನಡೆದಿದ್ದಾರೆ. ನಾವು ಸರ್ಕಾರ ಹೊರಗೆ ಹೋಗುವುದಕ್ಕೆ ಆಗುವುದಿಲ್ಲ; ನಿಭಾಯಿಸಬೇಕು. ಇಲ್ಲದೇ ಇದ್ದರೆ ಅವರ ಜೊತೆಯಲ್ಲಿ ಹೊರಹೋಗಬೇಕೆಂದು ನನ್ನ ತೀರ್ಮಾನ. ಏಕೆಂದರೆ ಕೇಂದ್ರ ಸರ್ಕಾರದ ವಿರುದ್ಧವಾಗಿ ಅವರು ಹೊರಹೋಗುತ್ತಿದ್ದಾರೆ. ಆದರೆ ನಾವು ಹೊರಗೆ ಹೋಗುವ ಹಾಗಿಲ್ಲ, ನಾವು ಸರ್ಕಾರವನ್ನು ನಡೆಸುತ್ತಿದ್ದೇವೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಿಂಧ್ಯ ಮತ್ತು ಅವರ ಸ್ನೇಹಿತರು ನಮ್ಮ ಪರವಾಗಿ ವಾದವನ್ನು ಮಾಡಿದ್ದಾರೆ, ನಮ್ಮ ಪರವಾಗಿ ಸದನದಿಂದ ಹೊರಹೋಗಿದ್ದಾರೆ. ರಾಜ್ಯ ಸರ್ಕಾರಕ್ಕೆ ಏನಾದರೂ ಹೊಸ ಸಲಹೆಗಳು ಬಂದರೆ ಖಂಡಿತ ಅವುಗಳನ್ನು ಪರಿಶೀಲನೆ ಮಾಡಿ ಎಲ್ಲರೂ ಕೂತು ಇದನ್ನು ಬಗೆಹರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಬಿ. ಇನಾಂದಾರ್ : ಕೆಲವು ಕ್ಲಾರಿಫಿಕೇಷನ್ ಕೊಡುವುದಕ್ಕೆ ನಾನು ಬಯಸುತ್ತೇನೆ. ಹೋದಸಲ ಇತರಕ್ಕಿಂಥ ಸಬ್ಸಿಡಿ ಕಾಂಪೋನೆಂಟ್ ಪ್ರತಿ ಕಿಲೋ ಇ. ಬಿ. ಪಿ. ಎಲ್. 9 ರೂಪಾಯಿ 5 ಪೈಸೆಗೆ ಅಲಾಟ್‌ಮೆಂಟ್ ಇತ್ತು. ಅದು 3 ರೂಪಾಯಿ 50 ಪೈಸೆಗೆ ನಾವು ಕೊಡುತ್ತಿದ್ದೇವೆ. ಆಗ ಸಬ್ಸಿಡಿ ಕಾಂಪೋನೆಂಟ್ ರಾಜ್ಯ ಸರ್ಕಾರದ ಮೇಲೆ ಕೇವಲ 5 ರೂಪಾಯಿ 55 ಪೈಸೆ ಪ್ರತಿ ಕಿಲೋಗೆ ಕೊಡುತ್ತಿದ್ದರು. ಈ ಸಲ ಎಕ್ಸ್‌ಟ್ರಾ ಬಿ. ಸಿ. ಎಲ್-ಸೆಂಟ್ರಲ್ ಇಶ್ಯು ಪ್ರೈಸ್ 11 ರೂಪಾಯಿ 80 ಪೈಸೆಗೆ ಏರಿಸಿದ್ದಾರೆ. ಅದನ್ನು 5 ರೂಪಾಯಿ 90 ಪೈಸೆಗೆ ತೆಗೆದಿದ್ದಾರಾ? The subsidy component we have to bear is about Rs. 7.00. Even this subsidy component is more than what was being given in the last year. ಆದ್ದರಿಂದ ಇದರ ಇತಿಮಿತಿಯನ್ನು ನೋಡಿದಾಗ 555 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ನೋಡಿಕೊಂಡು ನಾವು ಕೊಟ್ಟಿದ್ದೇವೆ. ಹೋದವರ್ಷ ಇದು 305 ಕೋಟಿ ಇತ್ತು. ಈ ವರ್ಷ ಅದನ್ನು ಹೆಚ್ಚಿಸಿ 555 ಕೋಟಿ ಸಬ್ಸಿಡಿ ಕೊಟ್ಟಿದ್ದೇವೆ. ಇದಕ್ಕೆ ಜನರು ಮತ್ತು ಎಲ್ಲರೂ ಸಹ ಸಹಕಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಿಮ್ಮದು ಬಡವರ ವಿರೋಧಿ ನೀತಿ. ಇದು ಜನ ವಿರೋಧಿ ನೀತಿ. ಜನವಿರೋಧ ನೀತಿಯನ್ನು ಇವರು ಯಾವ ರೀತಿ ಮಾಡುತ್ತಿದ್ದಾರೆ ಎಂದು ನಾವು ಹೇಳಬೇಕಾಗಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ : ಇವರದ್ದು ದೇಶವಿರೋಧಿ ನೀತಿ. ಬರೇ ಜನವಿರೋಧಿ ಅಲ್ಲ.

(ಅತೀವ ಗೊಂದಲ)

ಶ್ರೀ ಎಸ್. ಸುರೇಶಕುಮಾರ್ : ಅಧ್ಯಕ್ಷರೆ, ಪಾರ್ಲಿಮೆಂಟರಿ ಸಚಿವರು ಹೇಳಿದ್ದನ್ನು ಕಡತದಿಂದ ವಾಪಸ್ಸು ತೆಗೆಸಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಯಾವುದು ಜನವಿರೋಧಿ ನೀತಿ? ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ತೆಗೆದುಕೊಂಡಿರತಕ್ಕಂಥ ತೀರ್ಮಾನ ಈ ರಾಷ್ಟ್ರದ ಮೇಲೆ ಅತ್ಯಂತ ದೊಡ್ಡ ಆಘಾತವನ್ನುಂಟುಮಾಡಿದೆ. ಆದ್ದರಿಂದ ಅದೇ ಭಾಷೆ ಅವರಿಗೆ ಸರಿಯಾದದ್ದು.

ಶ್ರೀ ಎಸ್. ಸುರೇಶಕುಮಾರ್ : 'ದೇಶ ವಿರೋಧಿ ನೀತಿ' ಎಂದು ಏನು ಹೇಳಿದ್ದಾರೆ, -he should substantiate. ಏನು ವೊಕಾಬುಲರಿ ಇದೆ ಅಂತ ಮಾತನಾಡುವುದಲ್ಲ.....

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ : ಇಲ್ಲಿ ಕೇಳಿ. ಮಾನ್ಯ ಅಧ್ಯಕ್ಷರೇ, ಏಕಾಏಕಿ ಶೇಕಡಾ 35 ರಷ್ಟು ಡೀಸಲ್ ದರವನ್ನು ಏರಿಸಿ ಒಮ್ಮೆಗೆ ಸಾಮಾನ್ಯ ಪ್ರಯಾಣಿಕರ ಜೇಬಿಗೆ ತೊಂದರೆ ಮಾಡಿರತಕ್ಕಂಥಾದ್ದು ಬಡವರ ಪರವಾದದ್ದಾ?

(ಗೊಂದಲ)

ಶ್ರೀ ಎಸ್. ಸುರೇಶಕುಮಾರ್ : ರಾಜ್ಯ ಸರ್ಕಾರದ ಪಾಪದ ಕೂಸನ್ನು ಬೀದಿಯಲ್ಲಿ ಮೆರವಣಿಗೆ ಮಾಡಿ ಸುಟ್ಟಿರತಕ್ಕಂಥಾದ್ದು ಇದೆ.

(ಗೊಂದಲ)

(ಅನೇಕ ಮಂದಿ ಬಿ. ಜೆ. ಪಿ. ಸದಸ್ಯರುಗಳು ಏಕಕಾಲದಲ್ಲಿ ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು : ಸುರೇಶ್‌ರವರೇ ಹೀಗೆ ಎಲ್ಲರೂ ಒಟ್ಟಿಗೆ ಮಾತನಾಡಿದರೆ ಯಾರದೂ ಬರೆದುಕೊಳ್ಳುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : 50 ವರ್ಷಗಳಿಂದ ಇಲ್ಲಿಯವರೆಗೆ ಇವರು ಏನು ಮಾಡಿಕೊಂಡು ಬಂದರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಿಕೊಂಡು ಹೋಗುವುದಕ್ಕೆ ಕೇಂದ್ರ ಸರ್ಕಾರ ಕೆಲವೊಂದು ಕಠಿಣ ನಿಲುವನ್ನು ತೆಗೆದುಕೊಂಡಿರಬಹುದು. ಕೇಂದ್ರ ಸರ್ಕಾರ ತೆಗೆದುಕೊಂಡಂಥ ಕ್ರಮ ದೇಶದ ಆರ್ಥಿಕ ಸುಧಾರಣೆಗಾಗಿ. ಆದರೆ ಇವತ್ತು ಕೇಂದ್ರದ ಮೇಲೆ ಗೂಬೆ ಕೂರಿಸಿ, ಜನವಿರೋಧಿ ಕೆಲಸವನ್ನು ಏನು ಮಾಡುವುದಕ್ಕೆ ಹೊರಟಿದ್ದಾರೆ, ಮಾನ್ಯ ಚಂದ್ರೇಗೌಡರು 'ದೇಶ ವಿರೋಧಿ ಕೆಲಸ' ಎಂದರು. ದೇಶ ವಿರೋಧಿ ಕೆಲಸ ಏನು ನಡೆದಿದೆ ಹೇಳಿ? ಅದಕ್ಕಾಗಿ ಇವತ್ತು ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಕಾಂಗ್ರೆಸ್ ಆಡಳಿತದಲ್ಲಿ ದೇಶವನ್ನು ದಿವಾಳಿ ಅಂಚಿಗೆ ತಂದಿಟ್ಟಿದ್ದಾರೆ. ಇವರ ಪಾಪದ ಕೂಸನ್ನು ಕೇಂದ್ರ ಸರ್ಕಾರದ ಮೇಲೆ ಹೊರಿಸಿದ್ದಾರೆ. ಸರ್ಕಾರದ ಜನವಿರೋಧಿ ನೀತಿಯನ್ನು, ಬಡವರ ವಿರೋಧಿ ನೀತಿಯನ್ನು, ಕೂಲಿಕಾರರ ವಿರೋಧಿ ನೀತಿಯನ್ನು ಧಿಕ್ಕರಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಬಿ. ಜೆ. ಪಿ. ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಡೀಸೆಲ್ ಬೆಲೆ ಏರಿಸಿದ್ದು ರಾಜ್ಯ ಸರ್ಕಾರವೇ? ಅನಿಲದ ಬೆಲೆ ಏರಿಸಿದವರು ರಾಜ್ಯ ಸರ್ಕಾರದವರೇ? ಸೀಮೆಎಣ್ಣೆ,ಅಕ್ಕಿ ಗೋಧಿ ಬೆಲೆ ಏರಿಸಿದವರು ರಾಜ್ಯ ಸರ್ಕಾರದವರೇ? ಎಲ್ಲಾ ಬೆಲೆಗಳನ್ನು ಏಕಪಕ್ಷೀಯವಾಗಿ, ಎಲ್. ಪಿ. ಜಿ. ಯನ್ನೂ ಸೇರಿಸಿ ಕೇಂದ್ರ ಸರ್ಕಾರ, ರಾಜ್ಯಗಳ ಜೊತೆ ಸಮಾಲೋಚನೆ ಮಾಡದೇ, ರಾಜ್ಯಗಳ ಆರ್ಥಿಕ ಪರಿಸ್ಥಿತಿಯ ಮೇಲೆ ಎಂತಹ ಪರಿಣಾಮ ಬೀರುತ್ತದೆಂಬುದನ್ನು ಸ್ವಲ್ಪವೂ ಗಣನೆಗೆ ತೆಗೆದುಕೊಳ್ಳದೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿದೆ. ಇದು ರಾಷ್ಟ್ರದ್ರೋಹದ ಕೆಲಸ ಅಲ್ಲವೇ? ಬಡವರ ಪರವಾಗಿ ಮಾತನಾಡತಕ್ಕಂಥವರು, ಬಡವರ ಪರವಾಗಿ ಕೆಲಸ ಮಾಡುತ್ತೇವೆಂದು ಕೂಡತಕ್ಕಂಥವರು, ಇವರ ಆಳ್ವಿಕೆಯಲ್ಲಿ ಇವತ್ತು ಯಾರು ಯಾರು ಸಭಾತ್ಯಾಗಮಾಡಿದ್ದಾರೆ ಬಹುತೇಕ ಮಂದಿ, ಅವರೇ ಸರ್ಕಾರ ಆಳುತ್ತಿದ್ದಾರೆ, ಇಲ್ಲವೇ ಪಾಲುದಾರರಾಗಿದ್ದಾರೆ. ಅಲ್ಲೂ ಪಾಲು ಬೇಕು, ಇಲ್ಲಿ ವ್ಯಾಜ್ಯ ಮಾಡಬೇಕು. ಅದಕ್ಕಾಗಿಯೇ ನಾನು ಹೇಳಿದ್ದು. ಅಕ್ಕನ ಮನೆಗೂ ಹೋಗಬೇಕು, ಅಕ್ಕಿಯೂ ಖರ್ಚಾಗಬಾರದು. ಈ ನೀತಿ ಸರಿಯಲ್ಲ. ಅದರಿಂದ ನಾನು ಹೇಳಿದ ಭಾಷೆ, ಬಹಳ ಆಲೋಚನೆ ಮಾಡಿ ಹೇಳಿದ್ದೇನೆ. ಅದು ಸರಿಯಾಗಿದೆ, ನಾವು ಅದನ್ನು ತೆಗೆಯಬೇಕಾದ ಪ್ರಮೇಯ ಇಲ್ಲ.

ಶ್ರೀ ಡಿ. ಬಿ. ಇನಾಂದಾರ್ : ಅವರೇ ಏರಿಸಿದಂತಹ ಬೆಲೆಗೆ, ಅವರೇ ಪ್ರತಿಭಟನೆ ಮಾಡತಕ್ಕಂಥ ಒಂದು ಸಂದರ್ಭವನ್ನು ನೋಡುತ್ತಿದ್ದೇವೆ.

ಶ್ರೀ ಸಿ. ಎನ್. ನಾಡಗೌಡ : ಅಧ್ಯಕ್ಷರೆ, ಅವರು ಲಂಚಕೋರ ಸರ್ಕಾರ ಎಂಬ ಪದವನ್ನು ಬಳಸಿದ್ದಾರೆ, ದಯವಿಟ್ಟು ಅದನ್ನು ತೆಗೆಸಬೇಕು.

ಅಧ್ಯಕ್ಷರು : ತೆಗೆಸೋಣ. ಈಗ ಶ್ರೀಮಾನ್ ಸಿಂಧ್ಯ ಮತ್ತು ಇತರೆ ಸದಸ್ಯರು ಈ ಪ್ರೈಸ್ ರೈಸ್ ಬಗ್ಗೆ ಏನು ನಿಲುವಳಿ ಸೂಚನೆಯನ್ನು ತಂದಿದ್ದರೋ, ಇದರ ಬಗ್ಗೆ ಪುನಃ ಪರಿಣಾಮಕಾರಿಯಾಗಿ ಚರ್ಚೆ ಮಾಡುವುದಕ್ಕೆ ರಾಜ್ಯಪಾಲರ ಭಾಷಣ ಮತ್ತು ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ಬೇಕಾದಷ್ಟು ಅವಕಾಶ ಇರುವುದರಿಂದ I withhold my consent for that Adjournment Motion.